ಮೊದಲನೆಯದಾಗಿ ಸಂತಾಪ ಸೂಚನೆ ಇದೆ. ಮೊದಲು ಸಭೆಯಲ್ಲಿ ಸಂತಾಪ ಸೂಚನೆಯನ್ನು ತೆಗೆದುಕೊಳ್ಳಬೇಕು. ಅದು ಬಿಟ್ಟು ಬೇರೆ ವಿಚಾರಗಳನ್ನು ತೆಗೆದುಕೊಳ್ಳಬಾರದು. ಇದು ತಮ್ಮ ಗಮನಕ್ಕೆ ಬರಲಿಲ್ಲವೇ?

ಅಧ್ಯಕ್ಷರು : ನನ್ನ ಗಮನಕ್ಕೆ ಬಂದಿದೆ, ಸಂತಾಪ ಸೂಚನೆ ಎಂಬುದು ಗೊತ್ತು, ಆದರೆ ಮೊದಲು ನೀವೇ ಎದ್ದು ನಿಂತಿದ್ದು, ಏನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್ : ತಾವು ಹೇಳಿದ ಮೇಲೆ ಕುಳಿತುಕೊಂಡೆ, ಮೊದಲು ಸಂತಾಪ ಸೂಚನೆಯನ್ನು ಮಾಡಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ ಆಯಿತು, ಈಗ ಸಂತಾಪ ಸೂಚನೆಯನ್ನುತೆಗೆದುಕೊಳ್ಳೋಣ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ವಿಷಯ : ಬೆಳಗಾವಿ ಮಹಾನಗರ ಪಾಲಿಕೆ ಕಟ್ಟಡದ ಮೇಲಿನ ಎಂಇಎಸ್ ಧ್ವಜವನ್ನು ತೆಗೆಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅದನ್ನು ಸಂಜೆಗೆ ಇಟ್ಟುಕೊಳ್ಳೋಣ. ನಾನು ತಮ್ಮ ಕೊಠಡಿಯಲ್ಲಿ ಕುಳಿತು ಮಾತನಾಡುವಾಗ ಗಡಿಭಾಗದ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕೆಂಬ ಬಗ್ಗೆ ತಮಗೆ ಹೇಳಿದೆ. ಅದನ್ನು ತಾವು ಅರ್ಥಮಾಡಿಕೊಂಡಿದ್ದೀರಿ. ಬೆಳಗಾವಿಯಲ್ಲಿ ಸಭೆ ನಡೆಯುತ್ತಿರುವಂಥಾದ್ದು, ಬೆಳಗಾವಿಗೆ ಸಂಬಂಧಿಸಿದ ವಿಚಾರದ ಬಗ್ಗೆ ಸಮಸ್ಯೆಗಳು ಇವೆಯೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದೆ. ತಾವೂ ಸಹ ಅದನ್ನು ಒಪ್ಪಿಕೊಂಡಿದ್ದೀರಿ. ಬೆಳಗಾವಿಯಲ್ಲಿ ಕನ್ನಡಿಗರಿಗೆ ಆಗುತ್ತಿರುವಂತ ಅನ್ಯಾಯದ ಬಗ್ಗೆ ಗಮನಹರಿಸಬೇಕು. ಹಿಂದಿನ ಸರ್ಕಾರದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ವಿಧಾನಸಭೆಯಲ್ಲಿ ಮಹಾರಾಷ್ಟ್ರ ಗಡಿಯ ಬಗ್ಗೆ ನಿರ್ಣಯ ಮಾಡುವ ಬಗ್ಗೆ ಹೇಳಿದ್ದೆ. ಕಳೆದ ಸಭೆಯಲ್ಲಿ ಇಲ್ಲಿ ನಗರಪಾಲಿಕೆಯ ಮೇಲೆ ರಾಷ್ಟ್ರಧ್ವಜ ಇರಬೇಕೆ MES ಧ್ವಜ ಇರಬೇಕೆ ಎಂಬ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ. ನಾನು ಈ ಬಗ್ಗೆ ಅನೇಕ ಬಾರಿ ಹೇಳಿದ್ದೇನೆ. ಮಾನ್ಯ ಗೃಹ ಮಂತ್ರಿಗಳು ತಕ್ಷಣ ತೆಗೆದುಹಾಕುತ್ತೇವೆಂದು ಹೇಳಿದ್ದರು. ಇದು ಸರ್ಕಾರಿ ಕಟ್ಟಡವೇ, ಖಾಸಗಿ ಕಟ್ಟಡವೇ, ಸ್ವಂತ ಕಟ್ಟಡವೇ? ಸರ್ಕಾರೀ ಕಟ್ಟಡದ ಮೇಲೆ ರಾಷ್ಟ್ರಧ್ವಜ ಇರಬೇಕು ಅಥವಾ ಕರ್ನಾಟಕದ ಧ್ವಜ ಇರಬೇಕು. ಇವುಗಳ್ಯಾವುದೂ ಅಲ್ಲದೇ ಬೇರೆ ಯಾವುದೋ ಧ್ವಜವನ್ನು ಹಾರಿಸಲು ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಆ ಧ್ವಜವನ್ನು ತೆಗೆಸುವುದನ್ನು ಬಿಟ್ಟು ಸುಮ್ಮನೆ ಇಲ್ಲಿ ಬಂದು ಅಧಿವೇಶನ ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಮಹಾಜನ್ ವರದಿ ಕಾರ್ಯಗತವಾಗಿಲ್ಲ. ಮಹಾರಾಷ್ಟ್ರದ ಉಪಮುಖ್ಯಮಂತ್ರಿಗಳು ಇಲ್ಲಿಗೆ ಬಂದು ಮಹಾಜನ್ ವರದಿಯ ವಿರುದ್ಧವಾಗಿ, ಈ ರಾಜ್ಯದ ವಿರುದ್ಧವಾಗಿ, ಬೆಳಗಾವಿಯ ವಿರುದ್ಧವಾಗಿ ಉದ್ಧಟತನದ ಮಾತನ್ನಾಡಿದ್ದಾರೆ. ಇದುವರೆಗೂ

ನೀವು ಏಕೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ.? ಏಕೆ ರಾಷ್ಟ್ರಪತಿಗಳಿಗೆ ಹೇಳಲಿಲ್ಲ. ಪ್ರಧಾನಮಂತ್ರಿಗಳಿಗೆ ಹೇಳಲಿಲ್ಲ, ನಿರ್ಣಯವನ್ನು ಮಾಡಲಿಲ್ಲ, ಅವರನ್ನು ಬಂಧಿಸಿ ಎಂದು ಏಕೆ ಹೇಳಲಿಲ್ಲ? ಅದನ್ನು ಮಾಡುವುದನ್ನು ಬಿಟ್ಟು ಸುಮ್ಮನೇ ಕನ್ನಡದ ಬಗ್ಗೆ ಮಾತನಾಡುವುದು ಬೇಡ. ನಿಜವಾಗಿಯೂ ನಿಮಗೆ ಶಕ್ತಿ ಇದ್ದರೆ, ಚೈತನ್ಯವಿದ್ದರೆ, ಅದು ನಿಮ್ಮದೇ ಕಟ್ಟಡ ಎನ್ನುವುದಾದರೆ, ಸರ್ಕಾರದ ಕಟ್ಟಡ ಎನ್ನುವುದಾದರೆ ಅಲ್ಲಿಂದ ಆ ಧ್ವಜವನ್ನು ತೆಗೆಸಿ, ರಾಷ್ಟ್ರಧ್ವಜವನ್ನು ಹಾಕಿಸಿ. ಅದನ್ನು ಬಿಟ್ಟು ನೀವು ಮುಂದೆ ಹೋದರೆ ಅಗೌರವವಾಗುತ್ತದೆ, ಅದು ನಮಗೆ ಒಳ್ಳೆಯ ಸೂಚನೆಯಲ್ಲ, ನಮಗೆಲ್ಲರಿಗೂ ಅವಮಾನವಾಗುತ್ತದೆ. ಇದಕ್ಕೆ ತಾವು ಉತ್ತರ ಕೊಡಬೇಕು.

ಅಧ್ಯಕ್ಷರು : ಆಯಿತು, ಸರ್ಕಾರದ ಗಮನ ಸೆಳೆದಿದ್ದೀರಿ, ನೀವು ಕುಳಿತುಕೊಳ್ಳಿ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಉತ್ತರ ಕರ್ನಾಟಕದವರು. ಉತ್ತರ ಕರ್ನಾಟಕ ಭಾಗದ ಎಲ್ಲಾ ಶಾಸಕರ ಅಭಿಪ್ರಾಯವನ್ನು ತಾವು ಈಗಾಗಲೇ ಕೇಳಿದ್ದೀರಿ. ಎಲ್ಲರ ವಿಚಾರ ಏನಿದೆ ಎಂದರೆ ಇವತ್ತು ಎಲ್ಲಾ ಶಾಸಕರು ಕುಳಿತುಕೊಂಡು ಈ ಭಾಗದ ಚರ್ಚೆ ಮಾಡಬೇಕೆಂದು ಈಗಾಗಲೇ ವಿನಂತಿ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ನಮ್ಮದೂ ಸಹಮತವಿದೆ. ಕಬ್ಬಿನ ಸಮಸ್ಯೆಯ ಬಗ್ಗೆ ತಮಗೆ ಈಗಾಗಲೇ ಒಂದು ಅರ್ಜಿಯನ್ನು ಕೂಡ ಕೊಟ್ಟಿದ್ದೇವೆ. ತಾವು ಅದನ್ನು ಇವತ್ತು ತೆಗೆದುಕೊಳ್ಳುತ್ತೇನೆ, ಅದರ ಬಗ್ಗೆ ಮಾತನಾಡಲು ಹತ್ತು ನಿಮಿಷ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ. ಹಾಗಾಗಿ, ಈಗ ಮೊದಲನೆಯದಾಗಿ ರೈತರ ಸಮಸ್ಯೆಯಾದ ಈ ಕಬ್ಬಿನ ಸಮಸ್ಯೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಅದಕೆ ತಾವು ಈಗಾಗಲೇ ಒಪ್ಪಿಕೊಂಡಿದ್ದೀರಿ.

ಅಧ್ಯಕ್ಷರು : ಆಯಿತು, ಅವಕಾಶ ಕೊಡೋಣ. ಈಗ ನೀವು ಕುಳಿತುಕೊಳ್ಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ತಾವು Business Advisory Committee ಸಭೆಯನ್ನು ಕರೆದಾಗ ನಾವು ತಮಗೆ ಸ್ಪಷ್ಟವಾಗಿ ಹೇಳಿದೆವು. ಎರಡು ದಿವಸಗಳಲ್ಲಿ ಒಂದು ದಿವಸ ಪ್ರವಾಹ ಮತ್ತು ಬರದ ಬಗ್ಗೆ ಚರ್ಚೆಯಾಗಬೇಕು. ಇನ್ನೊಂದು ದಿವಸ ನಂಜುಂಡಪ್ಪ ವರದಿಯ ಬಗ್ಗೆ ಚರ್ಚೆಯಾಗಬೇಕು ಎಂದು ಹೇಳಿದ್ದೆವು. ಅದರ ಮಧ್ಯೆ ಅಲ್ಲೊಂದು ಇಲ್ಲೊಂದು Bill ಗಳನ್ನು ಹಾಕುತ್ತೇವೆ, ಅವುಗಳನ್ನು pass ಮಾಡಿಕೊಡಿ ಎಂದು ಸರ್ಕಾರದವರು ಕೇಳಿದಾಗ ಅದಕ್ಕೆ ನಾವು ಒಪ್ಪಿಕೊಂಡಿದ್ದೆವು. ಆದರೆ ಅದರ ಬಗ್ಗೆ ಈ ಸರ್ಕಾರಕ್ಕೂ ಕಳಕಳಿಯಿಲ್ಲ. ತಮಗೂ ಕಳಕಳಿಯಿಲ್ಲ. ನಾವು ಮಾತನಾಡಲು ಹೋದರೆ ಒಣಪ್ರತಿಷ್ಠೆ ಎಂದು ಹೇಳುತ್ತಾರೆ. ಇವತ್ತಿನ entire agenda billಗಳನ್ನು ಹಾಕಿದ್ದಾರೆ.

ಅಧ್ಯಕ್ಷರು : ಪ್ರತಿಸಾರಿಯೂ ನನ್ನ ಮೇಲೆಯೇ accuse ಮಾಡುವಂಥ ಪರಿಪಾಠ ಮಾಡಿಕೊಂಡಿದ್ದೀರಿ. Agendaದಲ್ಲಿ ಹಾಕಬೇಕಾದರೆ ಯಾರಾದರೂ ಅದರ ಬಗ್ಗೆ notice ಕೊಡಬೇಕು. ಅದರ ಬಗ್ಗೆ notice ಹಾಕಿದ್ದೀರಿ, ಇದರ ಬಗ್ಗೆ notice ಹಾಕಿಲ್ಲ. ಈಗ ಏನಾಗಿದೆ ಎಂದರೆ, ಸುಲಭವಾಗಿ ಸಿಗುತ್ತೇನೆ ಎಂದು ನನ್ನ

ಮೇಲೆಯೇ accuse ಮಾಡತಕ್ಕಂಥಾದ್ದಾದರೆ ಹೇಗೆ? ಇದು ಸರಿಯಲ್ಲ. ನನಗೆ notice ಕೊಟ್ಟಿದ್ದರೆ B.A.C. ಯಲ್ಲಿ ತೀರ್ಮಾನವಾದ ಹಾಗೆ ನಾನು agendaದಲ್ಲಿ ಹಾಕುತ್ತಿದ್ದೆ. ಇದೇನಿದು ನೀವು ಮಾತನಾಡುವುದು? ಆ ರೀತಿ ಮಾತನಾಡುವುದು ತಪ್ಪಾಗುತ್ತದೆ ಮಾಧುಸ್ವಾಮಿಯವರೇ,

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು ಹೇಳುವುದನ್ನೂ ದಯಮಾಡಿ ಕೇಳಿ.

ಅಧ್ಯಕ್ಷರು : ಏನು ಕೇಳುವುದು, ನೀವು ಹೇಳುವುದನ್ನೆಲ್ಲಾ ಕೇಳಿಕೊಂಡು ಕುಳಿತುಕೊಳ್ಳಬೇಕೇ? ನಮ್ಮನ್ನು ಏನು ಆದರೂ ಸುಮ್ಮನೆ ಕುಳಿತುಕೊಂಡು ಕೇಳಬೇಕೇ? ಇದು ಸರಿಯಲ್ಲ. Mr. Madhuswamy,

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ನಮ್ಮ ಮಾತನ್ನು ಕೇಳಬೇಕು.

ಅಧ್ಯಕ್ಷರು : ಹೇಳಿ, ಕೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿನ್ನೆ ಮತ್ತು ಇವತ್ತು ಈ ವಿಷಯವನ್ನು agendaದಲ್ಲಿ ಹಾಕಿಲ್ಲ. Bills ಹಾಕಿದ್ದೀರಿ.

ಅಧ್ಯಕ್ಷರು : ನಮಗೆ ಸೂಚನೆ ಬರಬೇಕು, ನಾನು ಹೇಳುವುದೇನೆಂದರೆ, B.A.C ಯಲ್ಲಿ ತೀರ್ಮಾನವಾದ ಹಾಗೆ ನಾವು agenda ತೆಗೆದುಕೊಳ್ಳಲು ಆಗುವುದಿಲ್ಲ. ಯಾವುದಾದರೂ ಸೂಚನೆ ಬಂದರೆ ಹಾಕುತ್ತೇನೆ. ಈ ಕಡೆಯಿಂದಲೋ, ಆ ಕಡೆಯಿಂದಲೋ ಸೂಚನೆ ಬರಬೇಕಲ್ಲವೇ? ಸೂಚನೆ ಬರದೆ ನಾನು ಹೇಗೆ ಹಾಕಲಿ, ನೀವು ಏನು ಮಾತನಾಡುತ್ತಿದ್ದೀರಿ ಮಾಧುಸ್ವಾಮಿಯವರೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಸರಿಯಾಗಿಯೇ ಮಾತನಾಡುತ್ತಿದ್ದೇನೆ, ಬರದ ಬಗ್ಗೆ ಒಂದು ದಿವಸ, ನಂಜುಂಡಪ್ಪ ವರದಿ ಬಗ್ಗೆ ಇನ್ನೊಂದು ದಿವಸ ಚರ್ಚೆಯಾಗಬೇಕು. ಅದರ ಮಧ್ಯೆ ಒಂದೊಂದು Bill ಗಳನ್ನು ಇಟ್ಟುಕೊಳ್ಳಿ ಎಂದರೆ, ಇವತ್ತಿನ agendaದಲ್ಲಿ entire Billಗಳನ್ನು ತಂದಿದ್ದೀರಿ. ಬರದ ವಿಷಯದ ಬಗ್ಗೆ ಮಾತನಾಡುವುದಕ್ಕೆ ಇವತ್ತು ಸಾಧ್ಯವಾಗುತ್ತದೆಯೇ? ಬರದ ಬಗ್ಗೆ ಮಾತನಾಡಲು ಕೊಟ್ಟಿರುವ ಸೂಚನೆ ಮೇಲೆ ನಿನ್ನೆ ಚರ್ಚೆ ಆಯಿತೇ? agenda ದಲ್ಲಿ ನೀವು first ಅದನ್ನು ಹಾಕಿಸಿ.

ಅಧ್ಯಕ್ಷರು : ಸೂಚನೆ ಕೊಟ್ಟರೆ ನಾನು ಹಾಕುತ್ತೇನೆ. ಆದರೆ ಸೂಚನೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸ್ಪಷ್ಟವಾಗಿ Business Advisory Committee ಯಲ್ಲಿ ತೀರ್ಮಾನವಾದ ಮೇಲೆ ಸೂಚನೆ ಏಕೆ ಬೇಕು? ಇವತ್ತು ನೀವು Bill ಗಳನ್ನು ಹಾಕಿದ್ದೀರಿ. ಬರದ ಬಗ್ಗೆ, ನೆರೆ ಹಾವಳಿ ಬಗ್ಗೆ, ನಂಜುಂಡಪ್ಪ ವರದಿ ಬಗ್ಗೆ ಚರ್ಚೆ ಮಾಡುವುದು ಯಾವತ್ತು?

MR. SPEAKER : B.A.C. ಯಲ್ಲಿ ಹಾಗೆ ಆದದ್ದು ನಿಜ. ಅದಲ್ಲದೇ Appropriation Bill ಸಹ ಆಗಬೇಕಾಗಿತ್ತು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಈಗ ಏಕೆ ಬೇಕಾಗಿತ್ತು ಸರ್?

ಅಧ್ಯಕ್ಷರು : ಇದೊಳ್ಳೆ ತಮಾಷೆಯಾಯಿತಲ್ಲಾ, ಅಲ್ಲಿ ನಿಮ್ಮೆದುರಿಗೆ ತೀರ್ಮಾನವಾಗಿರುವಾಗ, ಇಲ್ಲಿ ಬಂದು ಏಕೆ ಬೇಕಾಗಿತ್ತು ಅಂದರೆ ಹೇಗೆ? ಅಲ್ಲಿ ನೀವು ಹಾಗೆ ಹೇಳಿರಬಹುದು, ಆದರೆ decision has taken.ಆ ಪ್ರಕಾರವೇ agenda ಇದೆ. ಆದರೆ ನೀವು ಸುಮ್ಮನೆ ಮಾತನಾಡಿದರೆ ಏನು ಮಾಡುವುದು?

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರನ್ನು ನೀವು ಉಳಿಸುತ್ತಿದ್ದೀರಿ? ಹಾಗಾದರೆ ಆ ವಿಷಯಳು ಚರ್ಚೆಯಾಗುವುದು ಯಾವಾಗ ಎಂದು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನಂಜುಂಡಪ್ಪ ವರದಿ ಬಗ್ಗೆ ಮತ್ತು ಬರಗಾಲದ ಬಗ್ಗೆ ಚರ್ಚೆ ಮಾಡಬೇಕು ಎಂದು B.A.C. ಯಲ್ಲಿ ಮಾನ್ಯ ಖರ್ಗೆ ಸಾಹೇಬರು ಸಲಹೆ ಕೊಟ್ಟ ನಂತರ ಈ ಘನ ಸರ್ಕಾರ ಸಹ ಅದಕ್ಕೆ ಒಪ್ಪಿಕೊಂಡಿದೆ. ಈ ವಿಷಯದಲಿ ಮಾನ್ಯ ಖರ್ಗೆಯವರ ಸಲಹೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಸಹ ಅದನ್ನು ಪರಿಶೀಲಿಸಿ, ಇವೆಲ್ಲವೂ ಮಹತ್ವವಾದ ವಿಚಾರಗಳಾಗಿವೆ, ಅವುಗಳನ್ನು ಚರ್ಚೆ ಮಾಡಬೇಕು ಎಂದು ಹೇಳಿದರು. ಬರಗಾಲದ ಪರಿಸ್ಥಿತಿಯ ಬಗ್ಗೆ ನಾವು Adjournment Motion ಕೊಟ್ಟಿದ್ದೆವು. ನಮ್ಮ ಉತ್ತರ ಕರ್ನಾಟಕದ ಸ್ನೇಹಿತರು ಎನು ಹೇಳುತ್ತಿದ್ದಾರೆ ಅದು ತಪ್ಪಲ್ಲು, ಅದು correct.ಆಗಿದೆ. ಬರಗಾಲವಿದೆ. ಅಭಿವೃದ್ಧಿಯಾಗಬೇಕು, ಬೆಳಗಾವಿಯಲಿ ವಿಶೇಷ ಅಧಿವೇಶನವಾದಾಗ ಒಳ್ಳೆಯ ಕೆಲಸಗಳು ಆಗಬೇಕು. ಅದು ಅವರ ಅಪೇಕ್ಷೆಯಾಗಿದ್ದು ಅದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ನೀವು ತಪ್ಪು ಮಾಡಿದಿರಿ ಎಂದು ನಾನು ಹೇಳುವುದಿಲ್ಲ. ಸರ್ಕಾರದ ಜವಾಬ್ದಾರಿ ಏನಿತ್ತು ಎಂದರೆ ಇವತ್ತು ಮೊದಲನೆಯ item ಬರಗಾಲದ ಬಗ್ಗೆ ಚರ್ಚೆ ಎಂದು ಇರಬೇಕಾಗಿತ್ತು. ಆದರೆ ನಮ್ಮ Adjournment Motionಅನ್ನು Rule 69 ಕ್ಕೆ convert ಮಾಡಿ ಕೊನೆಯಲ್ಲಿ ಹಾಕಿದ್ದಾರೆ. ದಲ್ಲಿ ಎಲ್ಲಾ ಗಳೂ ಇವೆ. ತಾವೇ ಇದನ್ನು ವಿಚಾರ ಮಾಡಿ, ನಾವು notice ಕೊಟ್ಟಿದ್ದೇವೆ, ಅದನ್ನು Rule 69 ಕ್ಕೆ convert ಮಾಡಿ last subject ಎಂದು ಹಾಕಿದ್ದಾರೆ. agenda ಬರದ ಬಗ್ಗೆ ಚರ್ಚೆ ನಡೆಸಬೇಕು, ಇವತ್ತು ರಾಜ್ಯದ ರೈತರು ಕಷ್ಟದಲ್ಲಿದ್ದಾರೆ. ಬಡವರು ಕಷ್ಟದಲ್ಲಿದ್ದಾರೆ, ಹಾಗಾಗಿ ಮೊದಲು ಇವುಗಳ ಬಗ್ಗೆ ಚರ್ಚೆ ಮಾಡಬೇಕಾಗಿತ್ತು. ಇದರ ಬಗ್ಗೆ ಸರ್ಕಾರ ಬೆಳಕು ಚೆಲ್ಲಬೇಕು. ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡುವುದು ಎಂದು ಮಾನ್ಯ ಗೃಹ ಸಚಿವರು ಹೇಳಿದರು. ಆದರೆ ಇದು ಮೊದಲನೇ item ಆಗಿ ಏಕೆ ಬಂದಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಅಜೆಂಡಾ ಪ್ರಕಾರ ಹೋಗಿದ್ದರೆ ಇಷ್ಟು ಹೊತ್ತಿಗೆ ಬರಗಾಲದ ವಿಷಯಕ್ಕೆ reach ಆಗುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಹಾಗಾಗಿ ಈಗ ಇಲ್ಲಿ crocodile tears (ಮೊಸಳೆ ಕಣ್ಣೀರು) ಅವಶ್ಯಕತೆ ಇಲ್ಲ. ನಿಜವಾಗಿಯೂ ನಿಮಗೆ ರಾಜ್ಯದ ರೈತರ ಬಗ್ಗೆ ಕಳಕಳಿ ಇದ್ದರೆ, ಉತ್ತರ ಕರ್ನಾಟಕದ ಬಗ್ಗೆ ಚಿಂತನೆ ಇದ್ದರೆ agenda ದಲ್ಲಿ ಮೊದಲನೆಯದಾಗಿ ಆ ವಿಷಯ ಬರಬೇಕಾಗಿತ್ತು. ಆದರೆ ಆ ವಿಷಯ ಬಂದಿಲ್ಲ.

ಇನ್ನು, ಮಾನ್ಯ ಧರ್ಮಸಿಂಗ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ಮಾನ್ಯ ಸಭಾನಾಯಕರು ಬಹಳ ದೊಡ್ಡ ಮನಸ್ಸಿನಿಂದ ಚರ್ಚೆಗೆ ಅವಕಾಶ ಕೊಡಿ ಎಂದು ಹೇಳಿದ್ದಾರೆ. ಆದರೆ ನಮ್ಮ Home minister ಏಕೆ ಹೀಗೆ ಮಾಡುತ್ತಿದ್ದಾರೆಂಬುದು ಗೊತ್ತಿಲ್ಲ. Technicalities ಬೇಡ, ಈಗಾಗಲೇ ಇದು ಪತ್ರಿಕೆಯಲ್ಲಿ ಬಂದಿದೆ, ಇದು ಬಹಳ important ವಿಷಯವಾಗಿದೆ, ಎಲ್ಲರ concerned ಆಗಿದೆ, law and order ಬಗ್ಗೆ, corruption ಬಗ್ಗೆ ಚರ್ಚೆಯಾಗಬೇಕು ಎಂದು ನಾನು ಕೇಳುತ್ತಿದ್ದೇನೆ. ನಿಯಮ 363ರ ಕೆಳಗೆ ನಿಮಗೆ residual powers ಇದೆ. ಆದ್ದರಿಂದ ರಾಜ್ಯದ ಹಿತದೃಷ್ಟಿಯಿಂದ ತಾವು ಅವಕಾಶ ಕೊಡಬೇಕು. ರಾಜ್ಯಪಾಲರು ಏನು ಸಲಹೆ ಕೊಟ್ಟಿದ್ದಾರೆ. ರಾಜ್ಯಪಾಲರ ಏನಿವೆ, ಅದು ಚರ್ಚೆಯಾಗಬೇಕು. ರಾಜ್ಯಪಾಲರ concern ಎನಿವೆ. ಅದು ಚರ್ಚೆಯಾಗಬೇಕು ರಾಜ್ಯಪಾಲರ ಪತ್ರದ ಬಗ್ಗೆ ಚರ್ಚೆ ಆಗಬಾರದು ಎಂದು ಎಲ್ಲಿದೆ? ಇದ್ದರೆ ಹೇಳಿ. ಹಾಗಾಗಿ ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು, ಬರಗಾಲದ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್. ಆಂಜನೇಯ : ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ನಡೆಯುತ್ತಿರತಕ್ಕಂತ ಈ ಅಧಿವೇಶನ ಐತಿಹಾಸಿಕವಾದಂಥ ಒಂದು ಅಧಿವೇಶನವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಸರ್ಕಾರ ಉತ್ತರ ಕೊಡಲಿಲ್ಲ. ಧ್ವಜ ತೆಗೆಸುವ ಬಗ್ಗೆ ಉತ್ತರ ಏನು ಎಂದು ತಾವು ಹೇಳಿ. ಇಲ್ಲಿ ಅಧಿವೇಶನ ನಡೆಸುತ್ತಿರುವುದು ಏತಕ್ಕೆ? ಕನ್ನಡ, ಕರ್ನಾಟಕ, ಗಡಿನಾಡು, ಹೊರನಾಡು ಇದರ ಬಗ್ಗೆ ಅಧಿವೇಶನ ನಡೆಯುತ್ತಿರುವಾಗ ನೀವು ಅದನ್ನೇ ಮರೆಯುವುದಾದರೆ ಹೇಗೆ? ದಯಮಾಡಿ ಹೇಳಬೇಕು ನೀವು, ಏನು ಮಾಡುತ್ತೀರಿ, ನಿಮ್ಮ ಸರ್ಕಾರದ ನಿರ್ಧಾರ ಏನು ಎನ್ನತಕ್ಕಂಥಾದ್ದನ್ನು ನೀವು ಸ್ಪಷ್ಟವಾಗಿ ಸ್ಪಷ್ಟಪಡಿಸಿ. ಇದನ್ನು ಸುಮಾರು ವರ್ಷಗಳಿಂದ ಹೇಳಿಕೊಂಡು ಬರುತ್ತಿದ್ದೇವೆ. ಸರ್ಕಾರ ಇದರ ಬಗ್ಗೆ ಏನು ಹೇಳುತ್ತದೆ ಎಂದು ತಾವು ಹೇಳಬೇಕು. ತಾವು ಉತ್ತರ ಹೇಳಿ, ಇಲ್ಲದಿದ್ದರೆ ಗೃಹ ಮಂತ್ರಿಗಳಾದರೂ ಹೇಳಲಿ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ನನ್ನ ಪ್ರಶ್ನೆಗೆ ಸರ್ಕಾರ ಉತ್ತರ ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾಗಿರತಕ್ಕಂಥ ವಾಟಾಳ್ ನಾಗರಾಜ್‌ರವರು ಧ್ವಜದ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ.....

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಎಂ.ಇ.ಎಸ್. ನ. ಶ್ರೀ ಮೋಹನ್ ಕಿನೇಕರ್ ರವರು ಮರಾಠಿ ಭಾಷೆಯಲ್ಲಿ ಮಾತನಾಡಿದರು)

12.30 ಪಿ.ಎಂ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ಅವರ ಮಾತಿಗೆ ಬೆಲೆ ಕೊಡಬೇಕಾಗಿಲ್ಲ. ನೀವು ಹೇಳಿ. ಎಂ.ಇ.ಎಸ್.ನವರ ಮಾತಿಗೆ ನೀವು ಇಲ್ಲಿ ಬೆಲೆ ಕೊಡಬೇಕಾಗಿಲ್ಲ. ಅವರು ಕರ್ನಾಟಕದ ವಿರೋಧಿಗಳು, ಕನ್ನಡದ ವಿರೋಧಿಗಳು, ರಾಜ್ಯದ ವಿರೋಧಿಗಳು, ಆದ್ದರಿಂದ ಅವರಿಗೆ ಪ್ರಾಶಸ್ತ್ಯ ಕೊಡಬೇಕಾಗಿಲ್ಲ. ಯಾವುದೇ ಕಾರಣಕ್ಕೆ ಅವರ ಒಂದು ಅಂಶಕ್ಕೂ ನೀವು ಬೆಲೆ ಕೊಡಬೇಕಾಗಿಲ್ಲ.

(ಅಡಚಣೆ)

ಶ್ರೀ ಜಿ.ಟಿ. ದೇವೇಗೌಡ : ಅವರು ಮುಖ್ಯಮಂತ್ರಿಗಳಿಗೆ ಅಭಿನಂದನೆ ಸಲ್ಲಿಸುತ್ತಿದ್ದಾರೆ.

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಮನೋಹರ ಕಲ್ಲಪ್ಪ ಕಿನೇಕರ್ : (ಮಾನ್ಯ ಸದಸ್ಯರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾತೃ ಭಾಷೆ ಕನ್ನಡ. ಅದನ್ನು ಕಲಿಯಲೇಬೇಕು. ಮರಾಠಿ ಅಲ್ಲ. ಅದರಲ್ಲಿ ಕನ್ನಡ ಬಿಟ್ಟು ಬೇರೆ ಪ್ರಶ್ನೆ ಇಲ್ಲ.

(ಅಡಚಣೆ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ ಎಲ್ಲಾ ಹೀಗೆ ನಿಂತುಕೊಂಡರೆ ಹೇಗೆ? ಅವರು ಕುಳಿತುಕೊಂಡಿದ್ದಾರೆ. ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಹಲವಾರು ವರ್ಷಗಳ ಬೇಡಿಕೆ ವಿಧಾನ ಸಭೆ ಕಲಾಪ ಬೆಳಗಾಂನಲ್ಲಿ ಆಗಬೇಕೆಂದು ಇತ್ತು. ಇದರ ಬಗ್ಗೆ ಹಲವಾರು ಪ್ರಮುಖರು ಚರ್ಚೆ ಮಾಡುತ್ತಿದ್ದರು. ಇವತ್ತು ಎಲ್ಲಾ ಸದಸ್ಯರ ಸಹಕಾರದಿಂದ ಬಹಳ ದಿನಗಳ ಆಸೆ ಈಡೇರುವ ಸನ್ನಿವೇಶದಲ್ಲಿ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಧ್ವಜದ ಬಗ್ಗೆ ಹೇಳಿದರು. ಅದನ್ನು ತೆಗೆಸುವ ಕೆಲಸ ಮಾಡುತ್ತೇವೆ. ಸರ್ಕಾರಕ್ಕೆ ಶಕ್ತಿ ಇದೆ. ಆದ್ದರಿಂದ, ಅವರೇನು ಧ್ವಜದ ಚರ್ಚೆ ಮಾಡಿದ್ದಾರೆ, ಅದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಆ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಹಿಂದೆ ಸರಿಯತಕ್ಕಂಥ ಪ್ರಶ್ನೆಯಿಲ್ಲ ಎಂದು ಹೇಳುತೇನೆ. ಇವತ್ತು ನಾನು ಮತ್ತೆ ಎಲ್ಲಾ ಸದಸ್ಯರಲ್ಲಿ ಮನವಿ ಮಾಡುತ್ತಿದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರೆ ಧ್ವಜ ತೆಗೆಸೋಣ ಆತುರವೇತಕ್ಕೆ? ಅವರು ನಮ್ಮ ಸರ್ಕಾರ ಬಂದ ಮೇಲೆಯೇ ಧ್ವಜ ಹಾರಿಸಿದ್ದಾರೆಯೇ? ಅದು ಬಹಳ ವರ್ಷಗಳಿಂದ ಇದೆ. ಅದನ್ನು ತೆಗೆಸುತ್ತೇನೆ. ಅದನ್ನೂ ತೆಗೆಸೋಣವಂತೆ, ತೆಗೆಸುತ್ತೇನೆ. ತೆಗೆಸುವ ಒಂದು ಶಕ್ತಿ ನಮಗೂ ಇದೆ. ತೆಗೆಸೋಣವಂತೆ. ಆ ಆಸೆಯನ್ನೂ ನೆರವೇರಿಸಿಕೊಡುತ್ತೇವೆ. ನಾನು ಹಲವಾರು ಬಾರಿ ಹೇಳಿದ್ದೇನೆ. ಬೆಳಗಾವಿಯಲ್ಲಿ ಈ ರೀತಿಯ ಒಂದು ವಾತಾವರಣ ನಿರ್ಮಾಣ ಮಾಡತಕ್ಕಂಥದ್ದಕ್ಕೆ ಕೆಲವು ವ್ಯಕ್ತಿಗಳು ಹಲವಾರು ಪ್ರಯತ್ನ ಪಟ್ಟರು ಹಾಗೂ ಒಂದು ರೀತಿಯ ಗೊಂದಲ

ಸೃಷ್ಟಿ ಮಾಡಿದ್ದಾರೆ. ಆ ಗೊಂದಲಗಳನ್ನು ಬಗೆಹರಿಸಬೇಕೆನ್ನುವುದು ಸರ್ಕಾರದ ಗಮನದಲ್ಲಿದೆ. ಇವತ್ತು ಧ್ವಜದ ವಿಷಯದಲ್ಲಿ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಧ್ವಜವನ್ನು ತೆಗೆಸತಕ್ಕಂಥದ್ದಕ್ಕೂ ಕೆಲವೊಂದು ಚರ್ಚೆಯನ್ನು ಸರ್ಕಾರ ಮಾಡಿತ್ತು. ಅದು ಆಗದೇ ಇದ್ದಾಗ, ಮನವೊಲಿಸತಕ್ಕಂಥ ಕೆಲಸ ಮಾಡಲಿಕ್ಕೆ ನಾನು ಮೊದಲನೆಯದಾಗಿ ಪ್ರಯತ್ನಪಟ್ಟೆ. ನಮ್ಮ ರಾಜ್ಯ ಸರ್ಕಾರದಲ್ಲಿ ಇವತ್ತೇನು ಬೆಳಗಾವಿ ನಮ್ಮ ರಾಜ್ಯದ ಒಂದು ಅಂಗವಾಗಿದೆ. ಇವತ್ತು ಧ್ವಜದ ವಿಷಯದಲ್ಲೂ ನಾನು ತೀರ್ಮಾನವನ್ನು ಮಾಡಿ ಆ ಧ್ವಜವನ್ನು ತೆಗೆಸತಕ್ಕಂಥದ್ದಕ್ಕೆ ನಾವು ತೀರ್ಮಾನ ಮಾಡುತ್ತೇವೆ. ಅದರ ಬಗ್ಗೆ ಹೆಚ್ಚಿನ ಪ್ರಸ್ತಾಪ ಬೇಕಿಲ್ಲ. ನಾನು ಆ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ. ಎಂದು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳುತ್ತಿದ್ದೇನೆ. ಹಾಗೂ ಒಂದು ಸದನದ ಮುಖೇನ ಸಭಾನಾಯಕನಾಗಿರುವ ಸಂದರ್ಭದಲ್ಲಿ ಹೇಳುತ್ತಾ, ದಯವಿಟ್ಟು, ಎಲ್ಲರಲ್ಲಿ ಮನವಿ ಮಾಡುತ್ತೇನೆ, ಆತುರ ಬೇಡ. ನಿಮಗೆ ಆತುರ ಏತಕ್ಕೆ?

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್ : ನನಗೆ ನೋವಾಗುತ್ತದೆ. ಸರ್ಕಾರದ ನಿರ್ಧಾರ ಸರಿಯಲ್ಲ

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸಭೆಯಿಂದ ಹೊರ ನಡೆದರು)

ಶ್ರೀ ರಮೇಶ್ ಲಕ್ಷ್ಮಣ ಕುಡಚಿ (ಬೆಳಗಾವಿ) : ಮಾನ್ಯ ಗೃಹ ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಕಳೆದ ಅಧಿವೇಶನದಲ್ಲಿ ಸಹ ಈ ಧ್ವಜವನ್ನು ತೆಗೆಯುವ ಬಗ್ಗೆ ಮಾತನಾಡಿದ್ದರು. ಆದರೆ, 1958 ನೇ ಇಸವಿಯಲ್ಲಿ ಬೆಳಗಾವಿ ಮಹಾನಗರಪಾಲಿಕೆಯ ಮೇಲೆ ಹಾರಿಸಿದಂಥ ಈ ಧ್ವಜ ಆಗಿನ ಸರ್ಕಾರ ಆಗಿನ ಅಂದರೆ, 'Any resolution passed will go to the Government then, the Collector', ಆ ವೇಳೆಯಲ್ಲಿ ಈ ಧ್ವಜವನ್ನು ಮಾನ್ಯತೆ ಮಾಡಿ ಕೊಟ್ಟಿದ್ದರು. ತದನಂತರ, 1992ನೇ ಇಸವಿಯಲ್ಲಿ ಒಂದು amendment ಆಗಿ 'Any Flag other then National Flag shall fly on the Government Offices with prior permision from the Government' ಎಂದು ಇತ್ತು. ಆದರೆ, ಸನ್ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಇವತ್ತೇನು ಪ್ರಶ್ನೆ ತೆಗೆದಿದ್ದಾರೆ. ಈ ಧ್ವಜವನ್ನು ತೆಗೆಯುವುದಕ್ಕೆ ಸರ್ಕಾರದ ಇಚ್ಛೆಯಾಗಿದ್ದರೆ. ಅದರಲ್ಲಿ amendment ಏನಾಗಿದೆ, ಅದಕ್ಕೆ amendment ಆಗಬೇಕಾಗಿದೆ. ಏಕೆಂದರೆ, ಈ amendment ಈಗ ಆಗಬೇಕಾಗಿದ್ದರೆ, 'Any Flag other then National Flag shall fly on the Government Offices with prior permision from the Government' ಎಂದು ಇರುವಾಗ ಈಗೇನಾಗಬೇಕಾಗಿದೆ ಎಂದರೆ, because it has already approved by the Government. ಇವತ್ತಿನವರೆಗೆ ಹಾರಿಸಿದ ಯಾವುದೇ ಧ್ವಜ Government Offices ಮೇಲೆ ಅಥವಾ Government building ಮೇಲೆ ಇರುವ ಧ್ವಜವನ್ನು ತೆಗೆಯಬೇಕಾದರೆ, ಇವತ್ತಿನವರೆಗೆ ಹಾರಿಸಿರುವ ಎಲ್ಲಾ ಧ್ವಜವನ್ನು ಮಾಡಿ ಇನ್ನೂ

ಹಾರಿಸಬೇಕಾದಂಥ ಧ್ವಜಕ್ಕೆ Government permission ಬೇಕೆಂದು ಈ amendment ಆದರೆ ಮಾತ್ರ ಇದು ಸಾಧ್ಯವಿದೆ. ಇಲ್ಲವೆಂದರೆ, ಕೇವಲ ಮುಖ್ಯಮಂತ್ರಿಗಳಾಗಲೀ ಅಥವಾ ಗೃಹ ಸಚಿವರಾಗಲೀ ಈ ವಿಷಯವನ್ನು ಹಿಂದಿನ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದ್ದರು. It has already approved by the Government ಎಂದಿರುವಾಗ ಸಂಬಂಧಿಸಿದ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. 1992 ರಲ್ಲಿ ಏನು amendment ಅನ್ನು ನೀವು ಮಾಡಿದ್ದೀರಿ. ಆ amendment ಇವತ್ತಿನವರೆಗೆ ಹಾರಿಸಿದ ಧ್ವಜಗಳನ್ನು cancel ಮಾಡಿ ಇನ್ನು ಮುಂದೆ ಹಾರಿಸಬೇಕಾದಂಥ ಧ್ವಜಗಳಿಗೆ ಸರ್ಕಾರದ ಪರವಾನಿಗೆ ತೆಗೆದುಕೊಂಡು ಹಾರಿಸಬೇಕೆಂದು amendment ಆದರೆ ಮಾತ್ರ ಇದು ಸಾಧ್ಯವಿದೆ. ಈಗಾಗಲೇ MES ನವರು High Court ಗೆ ಹೋದಾಗ ಈ ವಿಷಯ ಪ್ರಸ್ತಾಪವಾಗಿದ್ದರಿಂದ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ amendment ಆದರೆ ಮಾತ್ರ ಇದು ಸಾಧ್ಯವಿದೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು) : ಕನ್ನಡಿಗರಾಗಿ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. 1958ನೇ ಇಸವಿಯಲಿ ನಡೆದ ಒಂದು ಮಹಾನಗರಪಾಲಿಕೆಗೆ amendment ಮಾಡಿ ಇವತ್ತು ಅದು ತೀರ್ಮಾನವಾಗಲೇಬೇಕು. ಆ ತೀರ್ಮಾನವಾದರೆ ಮಾತ್ರ ಈ ವಿಶೇಷ ಅಧಿವೇಶನಕ್ಕೆ ಬೆಲೆ ಬರುತ್ತದೆ. ಅದು ಬಿಟ್ಟು ಏನೋ ಅಧಿವೇಶನ ನಡೆಯುತ್ತಿದೆ ಎನ್ನುವುದಲ್ಲ. ಏನು ಇಲ್ಲಿ ಕನ್ನಡಿಗರು ಮರಾಠಿಗರ ದೌರ್ಜನ್ಯಕ್ಕೆ ಒಳಗಾಗಿದ್ದರೆ, ಅವರ ನೋವನ್ನು ಅವರು ಹೇಳುತ್ತಿದ್ದಾರೆ. ಆ ನೋವನ್ನು ನಿವಾರಣೆ ಮಾಡಬೇಕಾದರೆ, ಇವತ್ತು ನಮಗೆ ಅಧಿಕಾರವಿದೆ. ಈ ಪ್ರಜಾಪ್ರಭುತ್ವದಲ್ಲಿ ಈ ವ್ಯಾಪ್ತಿ ಬೆಳಗಾಂ ಇದೆ. ಮಹಾಜನ ವರದಿಯಲ್ಲಿ congress ಸರ್ಕಾರ ಏನು ಒಂದು commission ಅನ್ನು appoint ಮಾಡಿತ್ತು. ಆ ವರದಿಯನ್ವಯ ಬೆಳಗಾಂ ಕರ್ನಾಟಕಕ್ಕೆ ಸೇರಬೇಕು ಎನ್ನುವ ಉದ್ದೇಶವೇನಿತ್ತು. ಇವತ್ತು ಮಾನ್ಯ ಕುಡಚಿಯವರು ಅದನ್ನು ನೇರವಾಗಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಮಂತ್ರಿಗಳು ಅದರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ amendment ಮಾಡಿ ಸರ್ಕಾರದ ಯಾವುದೇ ಒಂದು ಅನುಮತಿಯನ್ನು ಪಡೆಯದೇ ಯಾವುದೇ ರಾಷ್ಟ್ರಧ್ವಜವನ್ನು ಕನ್ನಡನಾಡಿನ ಧ್ವಜವನ್ನು ಬಿಟ್ಟು ಬೇರೆ ಧ್ವಜವನ್ನು ಹಾರಿಸಲಿಕ್ಕೆ ಅವಕಾಶ ಕೊಡಬಾರದೆನ್ನುವ ತೀರ್ಮಾನವನ್ನು ಇವತ್ತು ಈ ಸಭೆ ತೆಗೆದುಕೊಳ್ಳಬೇಕೆಂದು ನಾನು ಈ ಸಭೆಯ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಹಾಗೂ ಸಂಸದೀಯ ಸಚಿವರು) : ಈಗಾಗಲೇ ಮಾನ್ಯಮಂತ್ರಿಗಳು ಉತ್ತರಕೊಟ್ಟಿದ್ದಾರೆ. Flag Act ನ ಕೆಳಗೆ ಸರ್ಕಾರಿ ಕಛೇರಿಗಳ ಮೇಲೆ ನಮ್ಮ ರಾಷ್ಟ್ರಧ್ವಜವನ್ನು ಬಿಟ್ಟು ಬೇರೆ ಧ್ವಜವನ್ನು ಹಾರಿಸಲಿಕ್ಕೆ ಯಾವುದೇ ಅವಕಾಶವಿಲ್ಲ. ಆದರೆ, ಮಾನ್ಯ ಕುಡಚಿಯವರು ಕನ್ನಡದ ಪರವಾಗಿ ನಿಂತು ಗೆದ್ದವರು. ಕನ್ನಡಿಗರ ಮಾನವನ್ನು ಬೆಳಗಾವಿಯಲ್ಲಿ ಉಳಿಸಿದ

ಸದಸ್ಯರು, ಆದರೆ, ವಸ್ತುಸ್ಥಿತಿಯಲ್ಲಿ ಹೀಗಾಗಿದೆ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಪ್ರಥಮ ಬಾರಿಗೆ ನಮ್ಮ ಗಮನಕ್ಕೆ ಬಂದಿದೆ. ಈ ದಿವಸವೇ ಆ ವಿಚಾರದಲ್ಲಿ ಇಂಥ ವಿಚಾರದಲ್ಲೇನಾದರೂ High Court ನವರು ಏನಾದರೂ ಆಜ್ಞೆ ಮಾಡಿದ್ದಾರೆಯೇ? ಮಾಡಿದ್ದೇ ಆಗಿದ್ದರೆ, ಅದನ್ನು ತೆರವುಗೊಳಿಸುವ ಪ್ರಶ್ನೆ ಇದೆ. ಮಾಡದೇ ಇದ್ದರೆ, ಅದಕ್ಕೆ ನಾವು ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ. ನಾವು ಖಂಡಿತವಾಗಿ ಕಾನೂನು ಪ್ರಕಾರ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ತಾವು ನಿರ್ದಿಷ್ಟವಾಗಿ ಮಾತನಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ನಾನು ನಿರ್ದಿಷ್ಟವಾಗಿ ಹೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಗೆಳೆಯರಾದ ರಮೇಶ್ ಲಕ್ಷ್ಮಣ ಕುಡಚಿಯವರು ವಾಸ್ತವಾಂಶ ಹೇಳಿದ್ದಾರೆ. ಬಹುಶಃ ನಮ್ಮ ಕಾರ್ಯಕ್ರಮದ ಪ್ರಕಾರ ನಾಳೆ ನಮ್ಮ ಕಾರ್ಯಕ್ರಮ ಅಂತ್ಯಗೊಳ್ಳುತ್ತದೆ. ಅಷ್ಟರೊಳಗೆ ನೀವು ಈ amendment ಅನ್ನು ಸಿದ್ಧಪಡಿಸಿ ಇಲ್ಲಿಟ್ಟು pass ಮಾಡಿಕೊಂಡು Governor ಹತ್ತಿರ ಒಪ್ಪಿಗೆ ತೆಗೆದುಕೊಂಡು ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ, specific ಆಗಿ ಹೇಳಿ. Any flag other than National Flag with the prior permission of the Government ಎಂದು ಯಾವದೋ ಒಂದು ಸನ್ನಿವೇಶದಲ್ಲಿ Government approval ಕೊಟ್ಟಿದೆ. ಅದನ್ನು rescind ಮಾಡುವುದಕ್ಕೆ ನಿಮಗೆ ಅಧಿಕಾರ ಇದೆ. ಅಧಿವೇಶನ ಮುಗಿದ ತಕ್ಷಣ ordinance ಹೊರಡಿಸುತ್ತೇವೆ ಎಂದು ಹೇಳಿ. ಸುಗ್ರೀವಾಜ್ಞೆಯ ಮುಖಾಂತರ ಇದು ತಕ್ಷಣ ಆಗಬೇಕು. ತಾವು ಏನು ಇಲ್ಲಿ ಅಧಿವೇಶನ ಕರೆಸಿದ್ದೀರಿ, ಅದರ ಜ್ಞಾಪಕಾರ್ಥವಾಗಿ ಒಂದು ಒಳ್ಳೆಯ ನಿರ್ಣಯ ತೆಗೆದುಕೊಂಡ ಹಾಗೆ ಆಗುತ್ತದೆ. ವೇಳೆ ಇಲ್ಲದೇ ಇರುವುದರಿಂದ you resort to the provision of going for an ordiance. We can get it ratified in the next session. Let there not be any confusion here.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ಏನಾದರೂ permission ಕೊಟ್ಟಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಈ issue ಹಿಂದೆ ಮಾನ್ಯ ಧರ್ಮಸಿಂಗ್‌ರವರು ಇದ್ದಾಗ LHನಲ್ಲಿ ಬೆಳಗಾಂ ಮೇಯರ್‌ರವರಿಗೆ ಕಪ್ಪು ಮಸಿ ಬಳಿದು ವಿವಾದ ಉಂಟಾಗಿತ್ತು. ತಾವು ಇದಕ್ಕೆ importance ಕೊಡಬೇಕೆಂದು ಇಲ್ಲಿಗೆ ಬಂದಿದ್ದೇವೆ. ಈಗ ಏನು ಒಂದು ಐತಿಹಾಸಿಕವಾದ ಅಧಿವೇಶನ ನಡೆಯುತ್ತಿದೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಇದಕ್ಕೆ ಯಾವುದಾದರೂ ಒಂದು ರೂಪದಲ್ಲಿ ಎಂದರೆ cabinetನಲ್ಲಾಗಲೀ ಅಥವಾ ಅಧಿವೇಶನ ಮುಗಿದ ಮೇಲೆ ordinance ಹೊರಡಿಸುವ ಮೂಲಕ ಅಥವಾ administrative order issue ಮಾಡುವುದರ ಮೂಲಕ ಯಾವ ರೀತಿ ಮಾಡುತ್ತೀರಿ ಎಂಬುದರ ಬಗ್ಗೆ ಇಲ್ಲಿಂದ ಒಂದು message ಹೋಗಲಿ. Let a message directly go from this

House. This is our stand on this issue. ಇದು ಮೊದಲನೆಯದು. ಎರಡನೆದಯದಾಗಿ ಇದರ ಪರವಾಗಿ ಹೋರಾಟ ಮಾಡಿದವರ ಮೇಲೆ ಬೇಕಾದಷ್ಟು case ಗಳನ್ನು ಹಾಕಿಸಿದ್ದಾರೆ. ನಮ್ಮ police ಅಧಿಕಾರಿಗಳು ಇದರ ಪರವಾಗಿ ಹೋರಾಟ ಮಾಡಿದ್ದಾರೆ. ಧ್ವಜ ಇಳಿಸುವುದರ ಬಗ್ಗೆ ಏನು ಕೆಲವರ ಮೇಲೆ case book ಆಗಿದೆ, ಇದು ಬೆಳಗಾಂನಲ್ಲಿರಬಹುದು, LH ನಲ್ಲಿರಬಹುದು, ಆ ಎಲ್ಲಾ case ಗಳನ್ನು withdraw ಮಾಡುವುದಕ್ಕೆ ಈ ಸಭೆಯಲ್ಲಿ ತಾವು ಅಥವಾ ಉಪಮುಖ್ಯಮಂತ್ರಿಗಳು ಒಂದು ಆಶ್ವಾಸನೆ ಕೊಟ್ಟರೆ ಬಹುಶಃ ಈ ಸಭೆ ನಡೆಸಿದ್ದಕ್ಕೆ ಅರ್ಥ ಬರುತ್ತದೆ ಎಂದು ತಿಳಿಸುವುದಕ್ಕೆ ಬಯಸುತ್ತೇವೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ. National Flag Act ಅನ್ನತಕ್ಕಂಥದ್ದು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರತಕ್ಕಂಥದ್ದು. ಇದನ್ನು ನಾವು ತಿದ್ದುಪಡಿ ಮಾಡುವುದಕ್ಕೆ ಬರುವುದಿಲ್ಲ. ಇದರ ಮೇಲೆ ಅಧ್ಯಾಪನ ಹೊರಡಿಸುವುದಕ್ಕೂ ಆಗುವುದಿಲ್ಲ. ಅದರ ಪ್ರಕಾರ ಸರ್ಕಾರಿ ಕಛೇರಿಗಳಲ್ಲಿ ಆ ಒಂದು ಧ್ವಜವನ್ನು ಬಿಟ್ಟು ಬೇರೆ ಧ್ವಜವನ್ನು ಹಾರಿಸುವುದಕ್ಕೆ ಬರುವುದಿಲ್ಲ. ವಿಶೇಷ ಸಂದರ್ಭದಲ್ಲಿ ಆ ರೀತಿ ಮಾಡುವುದಕ್ಕೆ ಬರುತ್ತದೆ ಎಂದು ಹೇಳಿ ಹಿಂದೆ ಸರ್ಕಾರ ಏನಾದರೂ ಒಪ್ಪಿಗೆಯನ್ನು ಕೊಟ್ಟಿದೆ ಎನ್ನತಕ್ಕಂಥ ಮಾಹಿತಿ ಇವತ್ತು ನಮಗೆ ಲಭ್ಯವಾಗಿದೆ. ಆದ್ದರಿಂದ ಆ ಮಾಹಿತಿಯನ್ನು ನಾವು ತೆಗೆದುಕೊಂಡು ಅದಕ್ಕೆ ಎಲ್ಲಾ ಕಾನೂನಿನ ಪ್ರಕಾರ ಕ್ರಮವನ್ನು ಕೈಗೊಂಡು ಖಂಡಿತವಾಗಿಯೂ ಕ್ರಮವನ್ನು ಕೈಗೊಳ್ಳುತ್ತೇವೆ. ಮತ್ತೆ ಬೇರೆ ವಿಚಾರಗಳನ್ನು ಹೇಳಿದಿರಿ.

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ : ಮಾನ್ಯ ಅಧ್ಯಕ್ಷರೆ, ಬೆಳಗಾವಿ ಮಹಾನಗರ ಪಾಲಿಕೆ, ಆಗಿದೆ. ಧ್ವಜ ಹಾರಿಸಿದಾಗ ಆ ವೇಳೆಯಲ್ಲಿ Municipality ಇತ್ತು. ಆ Municipality ಇದ್ದಾಗ ಈ resolution pass ಆಗಿದೆ. ಸರ್ಕಾರದ ನಿಯಮದಂತೆ ಬೆಳಗಾವಿ ಮಹಾನಗರ ಪಾಲಿಕೆ ಅಥವಾ ಯಾವುದೇ ಮಹಾನಗರ ಪಾಲಿಕೆಯಲ್ಲಿ pass ಆದಂಥ resolution that all the resolutions go to the Government within 15 days from the date of passing. If no reply comes from the Government within sixty days, then it is deemd to be passed ಎಂದು ಆಗಿನ Municipal Act ಪ್ರಕಾರ pass ಆದಂಥ ಠರಾವುಗಳು, ಈಗ ಡಿ.ಸಿ. ಕಡೆಗೆ ಹೇಗೆ ಹೋಗುತ್ತವೆಯೋ ಹಾಗೆ ನಗರ ಪಾಲಿಕೆಯಲ್ಲಿ pass ಆದಂಥ ಠರಾವುಗಳು ಹೆಚ್.ಯು.ಡಿ.ಗೆ ಹೋಗುತ್ತದೆ. ಎರಡು ಠರಾವು ಆಗಿದ್ದವು. ಒಂದು ಬೆಳಗಾವಿ ಮಹಾನಗರ ಪಾಲಿಕೆಗೆ ಮೇಲೆ ಧ್ವಜವನ್ನು ಹಾರಿಸುವುದು. ಎರಡನೆಯದು ಅಧ್ಯಕ್ಷರ ಬಾನೆಟ್ ಮೇಲೆ ಧ್ವಜವನ್ನು ಹಾರಿಸುವುದು ಆಯಿತು. ಅಧ್ಯಕ್ಷರ ಬಾನೆಟ್ ಮೇಲೆ ಧ್ವಜ ಹಾರಿಸುವುದು ಆಯಿತು. ನಗರ ಪಾಲಿಕೆ ಮೇಳೆ ಧ್ವಜ ಹಾರಿಸುವುದು ಅದನ್ನು pass ಮಾಡಿದರು ಆಗಿನ Collector. ಸನ್ಮಾನ್ಯ ಸಚಿವರು ಏನು ಹೇಳುತ್ತಾರೆ ಇದು National Flag Act ಕೆಳಗೆ ಬರುತ್ತದೆ ಅಂತ. ಆದರೆ ಬೆಳಗಾವಿ ಮಹಾನಗರ

ಪಾಲಿಕೆ 1976ನೇ ಕಾಯ್ದೆಯನ್ವಯ ಇದು ನಮ್ಮ Act ನಲ್ಲಿ amendment ಆಗಿದೆ. ಮಹಾನಗರ ಪಾಲಿಕೆ Actನಲ್ಲಿಯೇ amendment ಆಗಿದ್ದರಿಂದ, ಆ Act ಹೀಗೆ ಹೇಳುತ್ತದೆ. Any flag other than national flag shall fly on the Government Offices with prior permission of the Government. ಇಲ್ಲಿ ಇಂದು M.E.S ಅಥವಾ ಈ ಭಾಗದ ಜನರ 1958ನೇ ಇಸವಿಯಲ್ಲಿ ಏನು ನಗರ ಪಾಲಿಕೆ ಇತ್ತು ಆ ವೇಳೆಯಲ್ಲಿ M.E.S ಏನು 1956ನೇ ಇಸ್ವಿಯಿಂದ ಗಡಿತಂಟೆ ಸಲುವಾಗಿ ಅಸ್ಥಿತ್ವದಲ್ಲಿ ಬಂದಿದೆ, ಅದು ನಮ್ಮ M.E.S ಧ್ವಜ ಎಂದು ಇಲ್ಲಿಯವರೆಗೆ ಹೇಳಿಕೊಂಡು ಬಂದು, ಈ ದಿವಸ ಆ ಧ್ವಜ ಹಿಂದೂಧರ್ಮದ ಧ್ವಜ ಎಂದು ಏನು ಹೇಳುತ್ತಿದ್ದಾರೆ. ಇವತ್ತು ಭಾರತೀಯ ಜನತಾ ಪಾರ್ಟಿಯ ನಾಯಕರೂ ಸಹ ಇದು ಹಿಂದೂ ಧರ್ಮದ ಧ್ವಜ ಇದೆ, ಇದನ್ನು ತೆಗೆಯಬೇಡಿ ಎಂದು ಏನು ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದುದು ಎಂದು ನಾನು ಹೇಳಬಯಸುತ್ತೇನೆ. ಅದಕ್ಕೆ ನಾನು ಹೇಳುವುದೇನೆಂದರೆ, National flag Act ಇದ್ದರೂ ಸಹ ಮಹಾನಗರ ಪಾಲಿಕೆ Act ನಲ್ಲಿ ಈ amendment ಆಗಿದ್ದರಿಂದ ಸರ್ಕಾರ ಇದಕ್ಕೆ ಒಪ್ಪಿದ್ದರಿಂದ, ಇನ್ನು ಮುಂದೆ ಸರ್ಕಾರಕ್ಕೆ ಇಚ್ಚಾಶಕ್ತಿ ಇದ್ದರೆ ಇದು amendment ಆಗಲೇಬೇಕಾಗುತ್ತದೆ. Amendment ಆಗದೇ ಇದ್ದರೆ ಏನೂ ಆಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, once it is approved by the Government, ಅದು it is a valid flag ಎಂದು ಆಗಿದೆ. ಅದಕ್ಕೆ ನಾನು ಹೇಳಬಯಸುತ್ತೇನೆ. ಇವತ್ತು ಸರ್ಕಾರದವರು ಇದನ್ನು ಮಾಡಬೇಕಾದರೆ ಮಾಡಬೇಕಾಗುತ್ತದೆ. amendment ಈಗ ಆಗಬೇಕಾಗುತ್ತದೆ. ಇವತ್ತಿನವರೆಗೆ ಹಚ್ಚಿದಂಥ ಧ್ವಜಗಳು, ಎಂಬುದನ್ನು cancel ಮಾಡಿ ಇನ್ನು ಮುಂದೆ ಹಚ್ಚತಕ್ಕಂಥ ಧ್ವಜಗಳು ರಾಜ್ಯ ಸರ್ಕಾರದ ಪರವಾನಗಿಯನ್ನು ತೆಗೆದುಕೊಳ್ಳಬೇಕು ಎಂದು ಈಗ ಅದಕ್ಕೆ amendment ಆದರೆ ಮಾತ್ರ ಇದು ಸಾಧ್ಯ ಇದೆಯೇ ಹೊರತಾಗಿ ಇಲ್ಲವಾದರೆ ಇದನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, high Court ನಲ್ಲಿ ಇದು ಆಗಬೇಕಾಗುತ್ತದೆ, ಅದಕ್ಕೇ ನಾನು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅವರೇ ಹೇಳುತ್ತಿದ್ದಾರೆ.

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ : ಇದಕ್ಕೆ ಕೇಂದ್ರ ಸರ್ಕಾರದ ಪ್ರಶ್ನೆಯೇ ಇಲ್ಲ. National Flag Act ನಲ್ಲಿ ಇದು ಬರುವುದೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರು ದಯಮಾಡಿ ತಾವು ಗಮನಿಸಬೇಕು. ಯಾವುದೇ ಮಹಾನಗರ ಪಾಲಿಕೆಗೆ ಪ್ರತ್ಯೇಕವಾದ ಕಾನೂನು ಇರುವುದಿಲ್ಲ. ನಮಗೆ ಬೇಕಾದಂಥ ನಿಯಮಾವಳಿಗಳನ್ನು ನಾವು ಮಾಡಿಕೊಳ್ಳುತ್ತೇವೆ, ನಿಮ್ಮ ಮಹಾನಗರ ಪಾಲಿಕೆ ಆಗಿರಬಹುದು. municipality ಆಗಿರಬಹುದು, ಅದಕ್ಕೆ ಪ್ರತ್ಯೇಕವಾದ ಕಾನೂನು ಇರುವುದಿಲ್ಲ. ತಾವೂ ಕೂಡ ಹೇಳಿದಿರಿ, 60 ದಿವಸದೊಳಗಾಗಿ ಹೋಗದೇ ಇದ್ದರೆ, it is deemed to have been consented. ಎನ್ನತಕ್ಕಂಥದ್ದರ

ಮೇಲೆ ತಾವು ವಾದವನ್ನು ಮಂಡಿಸಿದ್ದೀರಿ. It is a consent by default. It is not a consent given by the Government. It is a consent by default. ಅನೇಕ ಸಂದರ್ಭಗಳಲ್ಲಿ ಇಂಥ ವಿಚಾರಗಳಲ್ಲಿ ನಮಗೆ ಗೊತ್ತಿಲ್ಲದೆ ಗಮನಕ್ಕೆ ಬಾರದೆ ಆಗಿರುತ್ತದೆ, ಆದುದರಿಂದ ಆ ಕಾರಣಕ್ಕಾಗಿಯೇ ಏನು ತಾವು ವಿಚಾರಗಳನ್ನು ಹೇಳಿದಿರಿ, ತಾವು ಹಿರಿಯ ಸದಸ್ಯರಾಗಿರುವುದರಿಂದ.....

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಏಕೆಂದರೆ, ಏನು municipal act ಇದ್ದಾರೆ, ಏನು ಪ್ರಕಾರ ಆದಂಥ ಠರಾವು ಆ ವೇಳೆಯಲ್ಲಿ ಏನು ಡಿ.ಸಿ. ಕಡೆ ಹೋಗುತ್ತಿತ್ತು. ಡಿ.ಸಿ,ಯವರು approve ಮಾಡಿದಂಥ letter ಮಹಾನಗರ ಪಾಲಿಕೆಯಲ್ಲಿ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ಇರಬಹುದು,

ಶ್ರೀ ರಮೇಶ್ ಲಕ್ಷ್ಮಣ್ ಕುಡಚಿ : ಅದಕ್ಕೇ ಹೇಳುತ್ತೇನೆ. it as already approved by the government

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಲ್ಲಿ ಎರಡು issues ಇದೆ, ಒಂದು, building ಮೇಲೆ ಧ್ವಜ ಹಾಕಲಿಕ್ಕೆ ಒಪ್ಪಿದರು ಆದರೆ, ಅಧ್ಯಕ್ಷರ ಬಾನೇಟ್ ಮೇಲೆ ಧ್ವಜ ಹಾಕಲುಒಪ್ಪಲಿಲ್ಲ. ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಇದರ ವಿಚಾರದಲ್ಲಿ ನಾವು ನಮ್ಮ ಮಾಹಿತಿಯನ್ನು ತೆಗೆದುಕೊಂಡು, ಸರ್ಕಾರದಲ್ಲಿ ಲಭ್ಯ ಇರತಕ್ಕಂಥ ಮಾಹಿತಿ ತೆಗೆದುಕೊಂಡಾದ ಮೇಲೆ, ನಾವು ಅದಕ್ಕೆ ಪ್ರತಿಕ್ರಿಯಿಸುತ್ತೇವೆ. ಸರ್ಕಾರ ಮಾತ್ರ ಯಾವುದೇ ಕಛೇರಿಗಳ ಮೇಲೆ ರಾಷ್ಟ್ರಧ್ವಜ ಅಲ್ಲದೇ ಬೇರೆ ಧ್ವಜ ಇದ್ದರೆ ಅದನ್ನು ತೆಗೆದು ಹಾಕುವಂಥ ಪ್ರಯತ್ನ ನಾವು ಮಾಡುತ್ತೇವೆ, ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸರ್ಕಾರ ಅದಕ್ಕೆ ಅನುಮತಿಯನ್ನು ಕೊಟ್ಟಿದ್ದರೆ ಆ ಅನುಮತಿಯನ್ನು ನೀವು ವಾಪಸ್ಸು ತೆಗೆದುಕೊಂಡುಬಿಡಿ, ಅದಕ್ಕೆ ಏಕೆ Amendment ಮಾಡಬೇಕು? ಅದಕ್ಕೆ ಏಕೆ ಬಿಲ್ ತರಬೇಕು? ಅಲ್ಲಿ ಫ್ಲಾಗ್ ಗೆ ಬರುವುದಿಲ್ಲ, ನೋಡಿ National Flag Act ಗೂ ಇದಕ್ಕೂ ಸಂಬಂಧವಿಲ್ಲ. ದಯವಿಟ್ಟು ತಾವು ಅದನ್ನು ಮರುಪರಿಶೀಲನೆ ಮಾಡಿ, Flag Act ಗೆ ಅದು ಹೇಗೆ ಬರುತ್ತದೆ? ಅದು ಗೆ ಬರುವುದಿಲ್ಲ. ಅದು ಸರ್ಕಾರ prior permission ಕೊಟ್ಟಿದ್ದರೆ, ಅದನ್ನು ವಾಪಸ್ ತೆಗೆದುಕೊಳ್ಳಿ, Administrative order ಮಾಡಿ ಅದಕ್ಕೆ. Bill ಏಕೆ ತರುತ್ತೀರಿ? ಸರ್ಕಾರ permission ಕೊಟ್ಟಿದೆಯೋ ಇಲ್ಲವೋ ನೋಡಿ. ಸರ್ಕಾರ permission ಕೊಟ್ಟಿದ್ದರೆ ವಾಪಸ್ ತೆಗೆದುಕೊಳ್ಳಿ.

ಶ್ರೀ ಎಂ.ಪಿ. ಪ್ರಕಾಶ್ : ಆಯಿತು, ಅವರೇ ಹೇಳಿದ್ದು, ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಅದನ್ನು ಮಾಡುವುದಕ್ಕೆ ಬರುವುದಿಲ್ಲ.

(ಈ ಹಂತದಲ್ಲಿ M.E.S ಪಕ್ಷದ ಸದಸ್ಯರಾದ ಶ್ರೀ ಮನೋಹರ್ ಕಿನೇಕರ್ ಹಾಗೂ ಯಶವಂತರಾವ್ ದಿಗಂಬರ್ ಪಾಟೀಲ್ ರವರು ಘೋಷಣೆಯನ್ನು ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮುನಿಸಿಪಾಲಿಟಿಯಲ್ಲಿ ಇಂಥ ಕಾನೂನನ್ನು ಪಾಸ್ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ ನೋಡಿ. ಇಲ್ಲದೇ ಇದ್ದರೆ ಅದು ಮುಗಿಯುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಈಗ ಮಾನ್ಯ ಎಂ.ಪಿ. ಪ್ರಕಾಶ್‌ರವರೇ ಹೇಳಿದರು. ಪುರಸಭೆಗಳಲ್ಲಿ ಯಾವುದೇ ಕಾಯಿದೆ ಕಾನೂನುಗಳು ಇಲ್ಲ. ಯಾವುದೇ ಸರ್ಕಾರಿ ಕಛೇರಿಗಳ ಮೇಲೆ ರಾಷ್ಟ್ರಧ್ವಜವನ್ನು ಬಿಟ್ಟು ಬೇರೆ ಧ್ವಜವನ್ನು ಹಾರಿಸುವುದಕ್ಕೆ ಬರುವುದಿಲ್ಲ ಅಂತ. ಹಿಂದೆ ಪುರಸಭೆ ಎಂದು ಇದ್ದಂತಹ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಅನುಮೋದನೆಯನ್ನು ಮಾಡಿದ್ದಾರೆ. ಮಹಾನಗರಪಾಲಿಕೆಯಲ್ಲಿ ನಿರ್ಣಯವಾಗಿಲ್ಲ. ಸರ್ಕಾರಕ್ಕೆ ಅಧಿಕಾರ ಇದೆ ಅಂದ ಮೇಲೆ ವಿಶೇಷ ಅಧಿವೇಶನ ನಡೆಯುವಂಥಹ ಸಂದರ್ಭದಲ್ಲಿ ಸರ್ಕಾರಕ್ಕೆ ಇರತಕ್ಕಂತಹ ಪವರ್ಸ್‌ನ್ನು ಉಪಯೋಗ ಮಾಡಿ ಇವತ್ತು ಮಹಾನಗರ ಪಾಲಿಕೆಯ ಮೇಲೆ ಇರತಕ್ಕಂತಹ ಮಹಾರಾಷ್ಟ್ರದ ಧ್ವಜವನ್ನು ತೆಗೆಸಿದರೆ ಈ ಒಂದು ವಿಶೇಷ ಅಧಿವೇಶನ ನಿಜವಾಗಿಯೂ ಕೂಡ ಅರ್ಥಪೂರ್ಣವಾಗುತ್ತದೆ. ಮಾನ್ಯ ರೆಡ್ಡಿಯವರು ಹೇಳಿದಹಾಗೆ ರಾಷ್ಟ್ರಧ್ವಜಕ್ಕೆ ಒಂದು ಕಾನೂನು ಮಾಡಿದ್ದಾರೆಯೇ ಹೊರತು ಬೇರೆ ಯಾವುದೇ ಧ್ವಜವನ್ನು ಹಾರಿಸುವುದಕ್ಕೆ ಕಾನೂನು ಇಲ್ಲ. ಅದನ್ನು ತೆಗೆಸತಕ್ಕಂತಹ ಅಧಿಕಾರ ಸರ್ಕಾರಕ್ಕೆ ಇದೆ. ಈ ಒಂದು ಅಧಿವೇಶನಕ್ಕೆ ಅರ್ಥ ಬರಬೇಕೆಂದರೆ ಮತ್ತು ಕನ್ನಡಿಗರಿಗೆ ಶಕ್ತಿ ತುಂಬಬೇಕೆಂದರೆ ಹಾಗೂ ಬೆಳಗಾವಿ ನಮ್ಮದು ಎಂದು ಹೇಳಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿರತಕ್ಕಂತಹ ಧ್ವಜವನ್ನು ತೆಗೆಸಬೇಕು.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಭಾರಿ ಪ್ರಚಾರ ಏನೂ ಬೇಕಾಗಿಲ್ಲ. ಇವತ್ತು ಯಾವುದೇ ಒಂದು ಸಂಘಸಂಸ್ಥೆಗೆ ನಾಮಿನೇಟ್ ಮಾಡತಕ್ಕಂತಹ ಅಧಿಕಾರ ಸರ್ಕಾರಕ್ಕೆ ಇದೆ. ಮತ್ತೆ ತೆಗೆಯುವುದಕ್ಕೂ ಕೂಡ ಅಧಿಕಾರವಿದೆ. ಅವತ್ತಿನ ಸರ್ಕಾರ ಒಪ್ಪಿಕೊಂಡಿದ್ದರೂ ಅದನ್ನು ತೆಗೆಯುವುದಕ್ಕೆ ಈ ಸರ್ಕಾರಕ್ಕೆ ಅಧಿಕಾರವಿದೆ. ಆದ್ದರಿಂದ withdraw ಮಾಡುವುದಕ್ಕೆ ಯಾರನ್ನು ಕೇಳಬೇಕು? ಯಾರನ್ನೂ ಕೇಳಬೇಕಾಗಿಲ್ಲ. ಇವತ್ತೇ withdraw ಮಾಡಿ National Flag ಹಾರಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಯಾರನ್ನೂ ಕೇಳತಕ್ಕಂತಹ ಅಧಿಕಾರ ಇಲ್ಲವೆನ್ನತಕ್ಕಂತಹದ್ದು ನನ್ನ ಭಾವನೆ.

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಆದೇಶ ಮಾಡುವುದಕ್ಕೆ ಇಷ್ಟೆಲ್ಲಾ ಚರ್ಚೆಯಾಗಬೇಕೆ? ಇವತ್ತಿನದಿವಸ ಇಡೀ ಸರ್ಕಾರ ಇಲ್ಲಿಯೇ ಇರುವಾಗ ಇದಕ್ಕೆ ಸಂಬಂಧಪಟ್ಟಂತಹ ಒಂದು ಆದೇಶ ಹೊರಡಿಸುವುದಕ್ಕೆ ತಕರಾರು ಏನೆಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಎರಡು ವಿಷಯಗಳಿವೆ. ಮಾನ್ಯ ಎಂ.ಪಿ. ಪ್ರಕಾಶ್ ಅವರು ಹೇಳಿದ ಹಾಗೆ Flag Code

Government of Indiaಗೆ ಸಂಬಂಧಪಟ್ಟಿದೆ. ಕಾನೂನು ಪ್ರಕಾರ ರಾಷ್ಟ್ರಧ್ವಜವನ್ನು ಹೇಗೆ ಹಾರಿಸಬೇಕೆಂದು ಮತ್ತು ಎಲ್ಲಿ ಹಾರಿಸಬೇಕೆಂದಿದೆ. 26ನೇ ಜನವರಿಯ ದಿವಸ Flag hoisting ಯಾರು ಹಾರಿಸಬೇಕೆಂದು ಮತ್ತು 15ನೇ ಆಗಸ್ಟ್ ದಿವಸ ಯಾರು ಹಾರಿಸಬೇಕೆಂದು ಅದರಲ್ಲಿ ನಮೂದು ಮಾಡಿದ್ದಾರೆ. ಅದಕ್ಕಾಗಿ ಅನೇಕ ಸಾರಿ ನಮ್ಮ ತಹಸೀಲ್ದಾರ್‌ರವರು ಸ್ವಾತಂತ್ರ್ಯ ದಿನಾಚರಣೆ ದಿವಸ Flag hoisting ಮಾಡುತ್ತಾರೆ. ಆ ದಿವಸ ಶಾಸಕರು ಮಾಡುವುದಿಲ್ಲ. ಏಕೆಂದರೆ, Flag Code ಪ್ರಕಾರ ತಾಲ್ಲೂಕು ಮ್ಯಾಜಿಸ್ಟ್ರೇಟರ್‌ರವರಿಗೆ ಹಕ್ಕನ್ನು ಕೊಟ್ಟಿದ್ದಾರೆ. ಜಿಲ್ಲೆಯಲ್ಲಿ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟ್‌ರವರಿಗೆ ಕೊಟ್ಟಿದ್ದಾರೆ. ಅದಕ್ಕಾಗಿ ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತು ತಾಲ್ಲೂಕುಗಳಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ರವರು ಇಲ್ಲದಿದ್ದರೆ ಇನ್ ಚಾರ್ಜ್ ಮಿನಿಸ್ಟರ್‌ರವರು ಸರ್ಕಾರಿ ಆಜ್ಞೆ ಪ್ರಕಾರ ಕೊಡುತ್ತಾರೆ. ಆದರೆ, ಇಲ್ಲಿರತಕ್ಕಂತ ವಿಷಯ ರಾಷ್ಟ್ರಧ್ವಜಕ್ಕೆ ಸಂಬಂಧಪಟ್ಟಂತೆ Code of Conduct ಬರುವಂಥದ್ದು ಅಲ್ಲ. ಇದು ನೇರವಾಗಿ ಮುನಿಸಿಪಾಲಿಟಿ Actನಲ್ಲಿ ಇದಕ್ಕೆ ಪ್ರಾವಿಜನ್ ಇದೆ. ಇದಕ್ಕೆ ಸರ್ಕಾರ ಸುತ್ತೋಲೆ ಮೂಲಕ ಒಪ್ಪಿದಂತಹ ವಿಷಯವಿದ್ದರೆ, ಇದಕ್ಕೆ ಎಲ್ಲಿಯವರೆಗೆ ಸರ್ಕಾರ ಒಪ್ಪಿದೆಯೋ ಅಲ್ಲಿಯವರೆಗೂ ಆ ಧ್ವಜ ಇರುತ್ತದೆ. ನಿಮಗೆ ಒಪ್ಪಿಗೆ ಇಲ್ಲದೆ ಇದ್ದರೆ ಅದು ಅಲ್ಲಿ ಇರುವುದಿಲ್ಲ ಎನ್ನತಕ್ಕಂಥ ವಾದವನ್ನು ನಮ್ಮ ಶಾಸಕರು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಸರ್ಕಾರ ಒಪ್ಪಿಗೆಯನ್ನು ವಿತ್‌ಡ್ರಾ ಮಾಡಿಕೊಂಡರೆ ಆಟೋಮ್ಯಾಟಿಕ ಆಗಿ ಅಲ್ಲಿಯೂ ಕೂಡ ಅದನ್ನು ತೆಗೆಯುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟು ಕೆಲಸವನ್ನು ತಾವು ಮಾಡುತ್ತೇವೆಂದು ಹೇಳಿದರೆ ಈ ವಿಷಯ ಇಲ್ಲಿಗೆ ಮುಕ್ತಾಯವಾಗುತ್ತದೆ. ನ್ಯಾಷನಲ್ ಕೋಡ್ ಆಫ್ ಕಂಡಕ್ಟ್ ಮತ್ತು ಫ್ಲಾಗ್ ಕೋಡ್ ಪ್ರಶ್ನೆ ಉದ್ಭವವಾಗುವುದಿಲ್ಲ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಧಾರವನ್ನು ಸರ್ಕಾರ ತೆಗೆದುಕೊಂಡರೆ ಅಂದರೆ, ಸಂಬಂಧಪಟ್ಟಂಥ ಸುತ್ತೋಲೆಯನ್ನು ವಿತ್‌ಡ್ರಾ ಮಾಡಿ ಹೊಸ ಸುತ್ತೋಲೆಯನ್ನು issue ಮಾಡಿದರೆ ಈ ವಿಷಯ ಇಲ್ಲಿಗೆ ಮುಕ್ತಾಯವಾಗುತ್ತದೆ. ಮತ್ತೆ ಇದರಿಂದ ಸಮಯವನ್ನು ಹಾಳು ಮಾಡತಕ್ಕಂಥ ಅವಶ್ಯಕತೆ ಕೂಡ ಇರುವುದಿಲ್ಲ.

ಶ್ರೀ ನೆ.ಲ. ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಅಧ್ಯಕ್ಷರೆ, ಬೆಳಗಾವಿಗೆ ಬೆಂಗಳೂರಿನಿಂದ ಬಂದು ಅಧಿವೇಶನ ನಡೆಸುವಂತಹ ಸಂದರ್ಭದಲ್ಲಿ ಅಲ್ಲಿರತಕ್ಕಂತಹ ಧ್ವಜವನ್ನು ಮಾನ್ಯಮುಖ್ಯಮಂತ್ರಿಗಳು ತೆಗೆಸಬೇಕು. ಕೇವಲ ಮಹಾರಾಷ್ಟ್ರದ ಏಕೀಕರಣ ಸಮಿತಿಯವರು ಪುಂಡಾಟಿಕೆ ಮಾಡಿಕೊಂಡು ಅಲ್ಲಿ ಬಾವುಟ ಹಾರಿಸುತ್ತಿದ್ದಾರೆ. ಇದನ್ನು ನೋಡಲಿಕ್ಕೆ ನಾವು ಸಾಕ್ಷಿಯಾಗಿ ಬರುವುದಕ್ಕೆ ತಯಾರಿಲ್ಲ. ಬಾವುಟ ತೆಗೆಸುತ್ತೀರೋ ಅಥವಾ ಇಲ್ಲವೋ ಎಂಬುದನ್ನು ಹೇಳಿ. ಇಲ್ಲದಿದ್ದರೆ ನಾವೇ ಹೋಗಿ ಮಾಡಬೇಕೇ ಹೇಳಿ. ನಮಗೆ ನಿಜವಾಗಿಯೂ ನಾಚಿಕೆಯಾಗುತ್ತದೆ. ಬೆಂಗಳೂರಿನಿಂದ ಇಲ್ಲಿಗೆ ಬಂದು ನಾವು ಇನ್ನು ಮೀನಾಮೇಷ

1.00 ಪಿ.ಎಂ.

ಎಣಿಸಬೇಕೆ? ಇದೇನು ರಾಷ್ಟ್ರಧ್ವಜವೇ? ಪಕ್ಷದ ಧ್ವಜವನ್ನು ಅವರ ಕಛೇರಿಯ ಮೇಲೆ ಹಾಕಿರತಕ್ಕಂಥಹದ್ದನ್ನು ನಾವು ನೋಡುವುದಕ್ಕೆ ಸಾಕ್ಷಿಯಾಗಿರಬೇಕೇ?

(ಅಡಚಣೆ)

ಅಧ್ಯಕ್ಷರು : ಮಾನ್ಯ ಸಚಿವರೆ, ಇದರ ಬಗ್ಗೆ ಅಂತಿಮವಾಗಿ ಏನಾದರೂ ಹೇಳಿ ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

(ಅಡಚಣೆ)

ಶ್ರೀ ಪಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ) : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ರಾಷ್ಟ್ರಧ್ವಜದ ಬಗ್ಗೆ ಚರ್ಚೆ ಮಾಡುವುದಕ್ಕೆ ಸ್ವಲ್ಪ ಸಮಯವನ್ನು ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಖರ್ಗೆಯವರು ಇದರ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನಾನು ಬೆಳಿಗ್ಗೆ ಎದ್ದು ಬೆಳಗಾವಿ ನಗರದಲ್ಲಿ ವಾಕ್ ಮಾಡಿಕೊಂಡು ಕಾಫಿ ಕುಡಿದು ಪತ್ರಿಕೆಯನ್ನು ತೆಗೆದುಕೊಂಡು ಬರುವಾಗ ಬೀದಿಯಲಿ ಹೂ ಮತ್ತು ತರಕಾರಿ ಮಾರಾಟ ಮಾಡಿಕೊಂಡಿರುವವರ ಜೊತೆ ಮಾತನಾಡಿಕೊಂಡು ಬಂದೆ. ಅವರು ಕನ್ನಡಿಗರಾಗಿದ್ದು, ಸ್ವಲ್ಪ ಮಟ್ಟಿಗೆ ಮರಾಠಿ ಭಾಷೆ ಬರುತ್ತದೆ. ಅವರು ಏನು ಹೇಳಿದರು ಎಂದರೆ 1984–85ರಲ್ಲಿ ದೊಡ್ಡ ಗಲಾಟೆ ಆಯಿತು ಆ ಸಂದರ್ಭದಲ್ಲಿ ಊರಿನಲ್ಲಿ ಇದ್ದಂತಹ ಅನೇಕ ಜನರು ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಹೊರಟು ಹೋದರೆಂದು ಹೇಳಿದರು. 7–8 ವರ್ಷಗಳಿಂದ ಈಚೆಗೆ ನಮಗೆ ಆ ಭಾವನೆಯೇ ಹೋಗಿದೆ. ನಾವೆಲ್ಲರೂ ಭಾರತೀಯ ಸಹೋದರರು ಎಂಬ ಭಾವನೆ ಇಟ್ಟುಕೊಂಡಿದ್ದು ನಾವು ಕನ್ನಡಿಗರು, ಮರಾಠಿಗರು ಎಂಬ ಬೇಧಭಾವವನ್ನು ಇಟ್ಟುಕೊಂಡಿಲ್ಲವೆಂದು ಹೇಳಿದರು. ಇದು ಕನ್ನಡಿಗರ ನೆಲ ಎಂಬ ಭಾವನೆ ಎಲ್ಲರಿಗೂ ಬಂದಿದೆ ಎಂದು ಹೇಳಿದರು. ಆದರೆ ಇತ್ತೀಚೆಗೆ ಸಣ್ಣಮಟ್ಟ ಗೊಂದಲ ಆದಮೇಲೆ ಈ ಕಡೆ ಮತ್ತು ಆ ಕಡೆಯವರು ಪ್ರತಿಷ್ಠೆಯಾಗಿ ತೆಗೆದುಕೊಂಡು ಇದು ದೊಡ್ಡ ಉಲ್ಬಣವಾಗುವ ಸ್ಥಿತಿಗೆ ಬಂದಿದೆ ಎಂದು ಹೇಳಿದರು. ನಾನು ಏಕೆ ಈ ಮಾತನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆಂದರೆ, ನಮ್ಮ ಭಾರತೀಯರು ಯಾವಾಗಲೂ ಸಂಯಮ ಪ್ರಿಯರು, ಅದು ಮರಾಠಿಗರಾಗಲಿ ಅಥವಾ ಕನ್ನಡಿಗರಾಗಲಿ ನಾವೆಲ್ಲರೂ ಸಹೋದರ ಭಾವನೆಯನ್ನು ಇಟ್ಟುಕೊಂಡು ದೇಶವಿದೇಶಗಳಿಂದ ಬರತಕ್ಕಂಥಹವರಿಗೆ ಆಶ್ರಯ ಕೊಡತಕ್ಕಂತಹ ಜನರಾಗಿದ್ದೇವೆ. ಸಮಾಧಾನವಾಗಿ ಬದುಕುವಂತಹ ಸಂದರ್ಭಗಳಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿರುವಾಗ ಮಾನ್ಯ ನರೇಂದ್ರಬಾಬುರವರು ಮಾತನಾಡುತ್ತಾ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ ಬಾವುಟ ಕಿತ್ತುಹಾಕಬೇಕೆಂದು ಹೇಳಿದರು. ಈಗ ಅಂತಹದ್ದು ಏನಿದೆ? ನಾವೆಲ್ಲರೂ ಭಾರತದ ಸಂವಿಧಾನದ ಕೆಳಗಡೆ ಬದುಕುತ್ತಿದ್ದೇವೆ. ನಮ್ಮ ಸಂವಿಧಾನ ಏನು ಹೇಳುತ್ತದೆ.

(ಅಡಚಣೆ)

ಮಾನ್ಯ ಕೃಷ್ಣಮೂರ್ತಿಯವರೆ, ದಯಮಾಡಿ ಕುಳಿತುಕೊಳ್ಳಿ. ನಾವೆಲ್ಲರೂ ಕೂಡ ಕನ್ನಡಿಗರು, ಇಲ್ಲಿ ಬಂದಿರತಕ್ಕಂತಹ ಮಾನ್ಯ ಧರ್ಮಸಿಂಗ್‌ರವರಾಗಲಿ, ಖರ್ಗೆಯವರಾಗಲಿ, ಮತ್ತೆ ಈ ಕಡೆ ಇರತಕ್ಕಂತಹ ಮಾನ್ಯ ಕುಮಾರಸ್ವಾಮಿ, ಯಡಿಯೂರಪ್ಪನವರಾಗಲಿ ಅಥವಾ ಇನ್ಯಾರೆ ಆದರೂ ಕೂಡ ಈ ಕನ್ನಡ ನೆಲದ ಒಂದು ಹೋರಾಟಕ್ಕಾಗಿ ಮತ್ತು ಕನ್ನಡ ನೆಲ ಸಮೃದ್ಧವಾಗಿರಬೇಕೆಂದು ಒಳ್ಳೆಯ ಆಲೋಚನೆಯನ್ನು ಇಟ್ಟುಕೊಂಡು ಬೆಂಗಳೂರಿನಿಂದ ಬೆಳಗಾವಿಗೆ ಬಂದು ಅಧಿವೇಶನ ನಡೆಸಲಾಗುತ್ತಿದೆ. ಬೆಳಿಗ್ಗೆ ಇಲ್ಲಿ ಕೆಲವರು ಮಾತನಾಡುತ್ತಾ ನಮ್ಮ ರಾಜಕೀಯ ಮೇಲಾಟದಲ್ಲಿ ಅಥವಾ ಯಾವುದೇ ಸಂಘ ಸಂಸ್ಥೆಗಳ ಪ್ರತಿಷ್ಠೆಯ ಮೇಲಾಟದಲ್ಲಿ ಬೆಳಗಾವಿ ಜನರಿಗೆ ಏನಾದರೂ ತೊಂದರೆಯಾದರೆ ಅವರೆಲ್ಲರೂ ನಮಗೆ ಶಾಪ ಹಾಕುತ್ತಾರೆ. ಏಕೆಂದರೆ, ನಾವು ಅಲ್ಲಿಂದ ಬಂದು ದೊಡ್ಡ ದುರಂತ ಮಾಡಿದಂತಾಗುತ್ತದೆ ಎನ್ನತಕ್ಕಂತಹ ಮಾತು ನಮ್ಮೆಲ್ಲರ ನೆನಪಿನಲ್ಲಿದೆ. ಮನವೊಲಿಸುವಂತಹ ಕಾರ್ಯಕ್ರಮದಿಂದ ಯಾವುದೇ ಒಂದು ಕಾರ್ಯಕ್ರಮವಾದರೆ ಬಹುಶಃ ಈ ದೇಶಕ್ಕೆ ಗಾಂಧಿ ಹೇಳಿಕೊಟ್ಟಂತಹ ಸನ್ಮಾರ್ಗವಾಗುತ್ತದೆ. ಅದಕ್ಕೆ ಎಲ್ಲರೂ ಕೂಡ ಒಪ್ಪುತ್ತಾರೆ. ಬಹುಶಃ ಬೆಳಗಾವಿ ಜನರ ಬೆಂಗಳೂರು ಜನರಿಗಿಂತ ಅತ್ಯಂತ ಸಂಯಮರೆಂದು ನನಗೆ ನಿನ್ನೆಯಿಂದ ಅನಿಸುತ್ತದೆ. ನಾವು ಇಲ್ಲಿಯೇ ಇರಬೇಕು, ಈ ನೆಲ ಬಹಳ ಚೆನ್ನಾಗಿದೆ. ಇಲ್ಲಿಯೇಕೆ ಹುಟ್ಟಲಿಲ್ಲವೆನ್ನತಕ್ಕಂತಹ ಭಾವನೆ ನನಗೆ ಬಂದಿದೆ. ಆದ್ದರಿಂದ ದಯಮಾಡಿ ಯಾವುದಕ್ಕೂ ಉದ್ವೇಗಕ್ಕೆ ಒಳಗಾಗುವುದು ಬೇಡ. ನಮ್ಮದು ಯಾವುದೇ ಒಂದು ಪಾರ್ಟಿಸಿಪೇಷನ್ ಇದ್ದರೆ ಬೆಂಗಳೂರಿನ ವಿಧಾನಸಭೆಯಲ್ಲಿ ಕುಸ್ತಿ ಮಾಡುವುದಕ್ಕೆ ಒಳ್ಳೆಯ ಅಖಾಡವಿದೆ. ಮತ್ತೆ ಮೈಕ್ ಇದೆ. ನಿಮ್ಮ ರಾಜಕೀಯ ಪಾಂಡಿತ್ಯ ಮತ್ತು ನಿಮ್ಮ ವಾಕ್ ಚಾತುರ್ಯ ತೋರಿಸುವುದಕ್ಕೆ ಅಲ್ಲಿ ಚೆನ್ನಾಗಿದೆ. ಅಲ್ಲಿ ಮಾಡೋಣ. ಇಲ್ಲಿಗೆ ಬಂದಿರತಕ್ಕಂಥದ್ದು ಗಡಿನಾಡು ಪ್ರದೇಶದ ಕನ್ನಡಿಗರಿಗೆ ನಾವು ನಿಮ್ಮ ಜೊತೆಯಲ್ಲಿದ್ದೇವೆ. ಈ ಕನ್ನಡಾಂಬೆಯ ಮಕ್ಕಳಾಗಿರತಕ್ಕಂತಹ ನಾವೆಲ್ಲರೂ ಒಂದು. ನಿಮ್ಮ ಎಲ್ಲಾ ಕಷ್ಟ ದುಃಖ ದುಮ್ಮಾನಗಳಿಗೆ ನಿಮ್ಮ ಜೊತೆಯಲ್ಲಿರತ್ತೇವೆನ್ನತಕ್ಕಂತಹ ಒಂದು ಸಂದೇಶವನ್ನು ಕೊಡುವುದಕ್ಕೆ ಬಂದಿದ್ದೇವೆ. ಆದ್ದರಿಂದ ನಾವೆಲ್ಲರೂ ಕೂಡ ಸಂಯಮದಿಂದ ನಡೆದುಕೊಳ್ಳಬೇಕಾಗುತ್ತದೆ. ಏಕೆಂದರೆ 40 ವರ್ಷಗಳ ರಾಜಕೀಯ ಅನುಭವ ಹೊಂದಿರತಕ್ಕಂತಹ ಬಹಳ ಜನ ಅತಿರಥ ಮಹಾರಥರೂ ಕೂಡ ಈ ಕೆಲಸವನ್ನು ಮಾಡಲಿಲ್ಲ. 48 ವರ್ಷದ ಈ ಪಡ್ಡೆಹುಡುಗನಾಗಿರುವ ಮಾನ್ಯ ಕುಮಾರಸ್ವಾಮಿಯವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಮಾನ್ಯ ಯಡಿಯೂರಪ್ಪನವರ ಸಹಕಾರದಿಂದ ಇಂತಹ ಒಂದು ಒಳ್ಳೆಯ ಕೆಲಸ ನಡೆದಂತಹ ಸಂದರ್ಭದಲ್ಲಿ ಕೆಲವರಿಗೆ ಬೇಸರ ಕೂಡ ಆಗಿರಬಹುದು. ಅಂದರೆ ಈ ಪಡ್ಡೆ

ಹುಡುಗ ಬಂದು ನಮ್ಮನ್ನೆಲ್ಲಾ ಬೈಪಾಸ್ ಮಾಡಿದ್ದಾನೆಂದು ಬೇಸರವಾಗಿರಬಹುದು. ದಯಮಾಡಿ ಯಾರೇ ಮಾಡಲಿ ಎಲ್ಲರೂ ನಿಮ್ಮ ಮಕ್ಕಳೆಂಬ ಭಾವನೆ ಇಟ್ಟುಕೊಂಡು ಈ ಒಂದು ಒಳ್ಳೆಯ ಕಾರ್ಯ ಸಂಯಮದಿಂದ ನಡೆಯಬೇಕು. ಮತ್ತೆ ಈ ಕನ್ನಡಿಗರಿಗೆ ಒಳ್ಳೆಯ ಸಂದೇಶವನ್ನು ಕೊಟ್ಟು ಹೋಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

(ಅಡಚಣೆ)

ಶ್ರೀ ಬಿ.ಸಿ. ಪಾಟೀಲ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದರೆ, ಇವತ್ತು ಮಾನ್ಯ **ವಾಟಾಳ್** ನಾಗರಾಜ್‌ರವರು ಹೇಳಿದರು ಅದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಇವತ್ತು ಮಾನ್ಯ ಎಂ.ಪಿ. ಪ್ರಕಾಶ್‌ರವರು ಹೇಳಿದ್ದಾರೆ, ಅದಕ್ಕೂ ಕೂಡ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಯಾವುದೇ ಕಾರಣಕ್ಕೂ ಈ ಬೆಳಗಾವಿ ಕರ್ನಾಟಕವನ್ನು ಬಿಟ್ಟು ಹೋಗುವುದಿಲ್ಲ. ಅದು ಸತ್ಯ. ಆದರೆ ನಾವು ಇವತ್ತು ಏನೋ ತೀರ್ಮಾನವನ್ನು ಮಾಡಿ ಬಿಟ್ಟು ಹೋಗಿ ತಕ್ಷಣ ಅದನ್ನು ತೆಗೆಸುವುದಕ್ಕಾಗುವುದಿಲ್ಲ. ಬೆಳಗಾವಿ ಜನರ ಶಾಂತಿಯನ್ನು ಕದಡುವುದಕ್ಕಾಗುವುದಿಲ್ಲ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಸಲಹೆಯನ್ನು ಕೊಟ್ಟ ಹಾಗೆ ಇದರ ಬಗ್ಗೆ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇದರ ಬಗ್ಗೆ ಸರಿಯಾದ ತೀರ್ಮಾನವನ್ನು ತೆಗೆದುಕೊಂಡು ಆ ಧ್ವಜವನ್ನು ತೆಗೆಯಲೇಬೇಕೆಂದು ಹೇಳಿ ನಾವೆಲ್ಲರೂ ಒಕ್ಕೊರಲಿನಿಂದ ಒತ್ತಾಯವನ್ನು ಮಾಡುತ್ತೇವೆ. ಆದರೆ ತಕ್ಷಣ ಇಲ್ಲಿಂದ ಹೋಗಿ ಕಿತ್ತು ಹಾಕುವುದಕ್ಕಾಗುವುದಿಲ್ಲ. ಅದನ್ನು ಕಿತ್ತು ಹಾಕುವುದಕ್ಕೆ ಹೋದರೆ ಇಡೀ ಜನರ ನೆಮ್ಮದಿಗೆ ಅಶಾಂತಿಗೆ ಕಾರಣವಾಗುತ್ತೇವೆ.

(ಅಡಚಣೆ)

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ನಿಮ್ಮೆಲ್ಲರದ್ದು ಜಾಸ್ತಿಯಾಯಿತು. ಮಾನ್ಯ ಕೃಷ್ಣಮೂರ್ತಿಯವರೇ, ಕುಳಿತುಕೊಳ್ಳಿ, ಈಗ ಏನೆಂದರೆ, ಯಾರೂ ಪರ್ಮಿಷನ್ ತೆಗೆದುಕೊಳ್ಳದೇ ಮಾತನಾಡುತ್ತಿದ್ದೀರಿ. ಪ್ರತಿಯೊಬ್ಬರೂ ಅವರವರ ತಕ್ಕ ಹಾಗೆ ಮಾತನಾಡುತ್ತಿದ್ದಾರೆ. ನನಗೂ ಹೇಳಿ ಸಾಕಾಗಿದೆ. ಮೊದಲು ಎಲ್ಲರೂ ದಯಮಾಡಿ ಕುಳಿತುಕೊಳ್ಳಿ. ಈಗ ಪ್ರತಿಯೊಬ್ಬರೂ ಎದ್ದು ನಿಂತುಕೊಂಡು ಮಾತನಾಡುತ್ತಿದ್ದರೆ ಹೇಗೆ? ಏನೆಂದರೆ, ಅದು ಎವೋಷನ್‌ದಿಂದ ಮಾತನಾಡುತ್ತಿದ್ದಾರೆ. ಇಷ್ಟು ವಿಚಾರವನ್ನು ಗಂಟೆಗಟ್ಟಲೆ ಮಾತನಾಡಿದರೆ ಹೇಗೆ? ಈಗ ಅಂತಿಮವಾಗಿ ಮಾನ್ಯ ಗೃಹ ಸಚಿವರು ಏನು ಹೇಳುತ್ತೀರಿ ಹೇಳಿ ಮುಕ್ತಾಯ ಮಾಡಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು) ಗೃಹ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸನ್ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ. ಅವರು ಕೂಡ ಹಿಂದಿನ ಅಧಿವೇಶನದಲ್ಲಿ ಕಾನೂನಿಗೆ ಅನುಗುಣವಾಗಿ ಸರ್ಕಾರಿ ಕಛೇರಿಗಳಲ್ಲಿ ರಾಷ್ಟ್ರಧ್ವಜವನ್ನು ಹಾಕಬೇಕಾಗುತ್ತದೆ. ಅದನ್ನು ಕಾಪಾಡಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯ. ಈಗ ಬೇರೆ ವಿಚಾರ, ಮಾನ್ಯ ಬೆಳಗಾವಿ ಶಾಸಕರುಗಳು ಹೇಳಿದ ರೀತಿಯಲ್ಲಿ ಸಂಬಂಧಪಟ್ಟ ಕಟ್ಟಡದ ಮೇಲೆ ಇರುವ ಧ್ವಜದ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ರಾಷ್ಟ್ರಧ್ವಜಕ್ಕೆ ಅವಕಾಶವನ್ನು ಮಾತ್ರ ಕಲ್ಪಿಸಿಕೊಡುತ್ತೇವೆ.

ಶ್ರೀ ಎಂ.ಕೆ. ಸೋಮಶೇಖರ್ : ಸರ್. ಅಜೆಂಡಾ ಪ್ರಕಾರ ಮುಂದಿನ ವಿಷಯವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಈಗ ಮಾನ್ಯ ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್‌ರವರು ಪ್ರಸ್ತಾಪ ಮಾಡಿರುವ ಬಗ್ಗೆ ಎಲ್ಲಾ ಕೇಳಿದ್ದೇನೆ. ದಯಮಾಡಿ ಕುಳಿತುಕೊಳ್ಳಿ. ನಿಮಗೆ ಎಷ್ಟು ಸಾರಿ ಹೇಳುವುದು.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಾವು ತೀರ್ಪು ಕೊಡುವುದಕ್ಕೆ ಮುಂಚೆ, ಈಗ ರಾಜ್ಯಪಾಲರು ಬರೆದಂಥ ಪತ್ರ ಪತ್ರಿಕೆಯಲ್ಲಿ ಬಂದಿದೆ.

ಒಬ್ಬ ಮಾನ್ಯ ಸದಸ್ಯರು : ಹೇಳಿದ್ದನ್ನೇ ಹೇಳುತ್ತಿದ್ದಾರೆ.

(ಅಡಚಣೆ)

2. ಘನತೆವೆತ್ತ ರಾಜ್ಯಪಾಲರು ಬರೆದಿರುವ ಪತ್ರದ ಬಗ್ಗೆ ಚರ್ಚೆಗೆ ಅವಕಾಶ ಕೋರಿಕೆ. (ಮುಂದುವರಿದ ಚರ್ಚೆ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಯಾವಾಗ ರಾಜ್ಯಪಾಲರು ಸರ್ಕಾರಕ್ಕೆ ಬಹಿರಂಗವಾಗಿ ಪತ್ರದಲ್ಲಿ ಪ್ರಕಟ ಮಾಡಿದ್ದಾರೆ. ನಾವು ಸದನದಲ್ಲಿ ಅದರ ಬಗ್ಗೆ ಚರ್ಚೆಯನ್ನು ಮಾಡುವುದಕ್ಕೆ ಕೇಳಿದ್ದೇವೆ. ಇವತ್ತು ಸಭಾನಾಯಕರು ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಕೆಲವು ಕ್ರಿಯಾ ಲೋಪಗಳನ್ನು ಮಾನ್ಯ ಪ್ರಕಾಶ್‌ರವರು ಎತ್ತಿದ್ದಾರೆ. ಅದರ ಮಧ್ಯೆದಲ್ಲಿ ಮುಖ್ಯ ಮಂತ್ರಿಗಳು ಸಭಾನಾಯಕರಾಗಿದ್ದಾರೆ. ಇದರಲ್ಲಿ ಏನು ಇದೆ ಎನ್ನುವುದರ ಬಗ್ಗೆ ಚರ್ಚೆ ಮಾಡಬೇಕಾದರೆ, ಚರ್ಚೆಗೆ ಸಿದ್ಧವಾಗಿದ್ದರೆ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನನಗೆ ಮತ್ತೊಮ್ಮೆ ನೀವು ಬೇರೆ ನಿಯಮಗಳಿಗೆ ಹೋಗದೆ ಈಗಾಗಲೇ ಮಾನ್ಯ ಖರ್ಗೆಯವರು 363 ರಲ್ಲಿ ಅನುಮತಿ ಕೊಡಬಹುದೆಂದು ಹೇಳಿದ್ದಾರೆ. ಇವತ್ತು ನಾವು ಏನು ಅಮೇರಿಕಾ ಮತ್ತು ಇಂಗ್ಲೆಂಡ್‌ಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಹೇಳುತ್ತಿಲ್ಲ. ಇವತ್ತು ರಾಜ್ಯಕ್ಕೆ ಸಂಬಂಧಪಟ್ಟಂಥ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಮತಿ ಕೊಡಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.